ದೆಹಲಿ ಕರ್ನಾಟಕ ಸಂಘದ

# ಅಭಿಮತ

ಆಗಸ್ಟ್ 2022
ಬೆಲೆ ರೂ. 1



ಭಾರತದ ಮೊದಲ ಪ್ರಜೆ ರಾಷ್ಟ್ರಪತಿ ಹುದ್ದೆಗೇರಿದ ಮೊದಲ ಬುಡಕಟ್ಟು ಮಹಿಳೆ **ಶ್ರೀಮತಿ ದ್ರೌಪದಿ ಮುರ್ಮು** ಅವರು ಸಂಸತ್ತಿನ ಐತಿಹಾಸಿಕ ಸೆಂಟ್ರಲ್ ಹಾಲ್‌ನಲ್ಲಿ ಪ್ರಮಾಣವಚನ ಸ್ವೀಕರಿಸುತ್ತಿರುವ ಅವಿಸ್ಮರಣೀಯ ಕ್ಷಣ

# ದೆಹಲಿ ಕನ್ನಡಿಗರೊಂದಿಗೆ ದೆಹಲಿಯಲ್ಲಿ ತಮ್ಮದೇ ಅಭಿನಯದ 'ವಿಕ್ರಾಂತ್ ರೋಣ' ಚಿತ್ರದ ಮೊದಲ ಪ್ರದರ್ಶನ ವೀಕ್ಷಿಸಿದ ನಟ ಕಿಚ್ಚ ಸುದೀಪ್






ಕನ್ನಡದ ಖ್ಯಾತ ಯುವ ನಿರ್ದೇಶಕ ಅನೂಪ್ ಭಂಡಾರಿ ಅವರು ನಿರ್ದೇಶಿಸಿರುವ, ತಾವೇ ಅಭಿನಯಿಸಿರುವ 'ವಿಕ್ರಾಂತ್ ರೋಣ' ಚಿತ್ರವನ್ನು ದೆಹಲಿ ಕನ್ನಡಿಗರು, ಕೇಂದ್ರ ಸಚಿವರು, ಸಂಸದರು ಹಾಗೂ ಕುಟುಂಬದವರೊಂದಿಗೆ ಕುಳಿತು ಕನ್ನಡದ ಖ್ಯಾತ ಬಹುಭಾಷಾ ನಟ ಕಿಚ್ಚ ಸುದೀಪ್ ಮತ್ತು ಪತ್ನಿ ಪ್ರಿಯಾ ಅವರು ದೆಹಲಿಯ ಯಶವಂತ್ ಪ್ಲೇಸ್‌ನ 'ಚಾಣಕ್ಯ ಪಿವಿಆರ್ ಇಸಿಎಕ್ಸ್'ನಲ್ಲಿ ಜುಲೈ 28ರಂದು ಗುರುವಾರ ರಾತ್ರಿಯ ಶೋ ವೀಕ್ಷಿಸಿ ಎಲ್ಲರನ್ನು ರಂಜಿಸಿದರು.

ಕಳೆದ ಸುಮಾರು 25 ವರ್ಷಗಳಿಂದ ಚಿತ್ರರಂಗದಲ್ಲಿದ್ದುಕೊಂಡು ಕನ್ನಡವೂ ಸೇರಿದಂತೆ ತೆಲುಗು, ತಮಿಳು, ಹಿಂದಿ ಭಾಷೆಗಳಲ್ಲೂ ನಟಿಸಿ ಚಿತ್ರ ರಸಿಕರಿಂದ ಸೈ ಎನಿಸಿಕೊಂಡಿರುವ ಕಿಚ್ಚ ಸುದೀಪ್ ಕನ್ನಡ ನಾಡಿನ ಒಳಗೆ ಹಾಗು ಹೊರಗೂ ಕೂಡ ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದಾರೆ ಎಂಬುದಕ್ಕೆ ದೆಹಲಿಯಲ್ಲಿ ಪ್ರದರ್ಶನ ಕಂಡ ವಿಕ್ರಾಂತ್ ರೋಣ ಚಲನಚಿತ್ರದ ಕನ್ನಡ ಹಾಗೂ ಹಿಂದಿ ಚಿತ್ರ ನೋಡಲು ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರೇ ಸಾಕ್ಷಿ.

1997 ರಲ್ಲಿ ಬಿಡುಗಡೆಯಾದ 'ತಾಯವ್ವ' ಚಿತ್ರದಲ್ಲಿ ಬಣ್ಣ ಹಚ್ಚುವ ಮೂಲಕ ಚಿತ್ರರಂಗ ಪ್ರವೇಶಿಸಿದ ಸುದೀಪ್ ಅವರು 2000 ರಲ್ಲಿ ಸುನಿಲ್ ಕುಮಾರ್ ದೇಸಾಯಿ ಅವರು ನಿರ್ದೇಶಿಸಿದ ಸ್ಪರ್ಶ ಚಿತ್ರದಲ್ಲಿ ನಾಯಕನಟರಾಗಿ ನಟಿಸಿದ ತದನಂತರ ಹುಚ್ಚ, ಕಿಚ್ಚ, ಮೈ ಆಟೊಗ್ರಾಫ್, ಕೆಂಪೇಗೌಡ, ಸ್ವಾತಿಮುತ್ತು, ಪೈಲ್ವಾನ್, ಮಾಣಿಕ್ಯ, ವಿಷ್ಣುವರ್ಧನ, ಕೋಟಿಗೊಬ್ಬ-2, 3 ಅಲ್ಲದೆ ತೆಲುಗು ಭಾಷೆಯಲ್ಲಿ ಈಗ, ಬಾಹುಬಲಿ, ಹಿಂದಿಯಲ್ಲಿ ರಾನ್ ಮತ್ತು ದಬಾಂಗ್-3, ತಮಿಳಿನಲ್ಲಿ ಪುಲಿ ಚಿತ್ರದಲ್ಲಿ ದಿಗ್ಗಜ ನಿರ್ದೇಶಕರು ಮತ್ತು ನಟರೊಂದಿಗೆ ಸುಮಾರು 41 ಸಿನಿಮಾಗಳಲ್ಲಿ ನಟಿಸಿ ತಮ್ಮ ನಟನಾ ಕೌಶಲ್ಯತೆಯನ್ನು ಗುರುತಿಸಿಕೊಂಡಿದ್ದಲ್ಲದೆ, ಜನಮನಗೆದ್ದಿರುವ ಕನ್ನಡದ ಖ್ಯಾತ ಟಿವಿ ಶೋ ಬಿಗ್ ಬಾಸ್ ಕಾರ್ಯಕ್ರಮವನ್ನು ಸುದೀಪ್ ಅವರು ಕಳೆದ ಎಂಟು ಸರಣಿಗಳಿಂದ ತಾವೇ ನಡೆಸಿಕೊಂಡು ಬರುತ್ತಿದ್ದಾರೆ.

ಕನ್ನಡ, ಹಿಂದಿ, ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲಿ ಬಿಡುಗಡೆಯಾಗಿರುವ ವಿಕ್ರಾಂತ್ ರೋಣ ಚಲನಚಿತ್ರವನ್ನು ಖ್ಯಾತ ನಿರ್ಮಾಪಕ ಜಾಕ್ ಮಂಜು ಅವರು ನಿರ್ಮಿಸಿದ್ದು, ಸುದೀಪ್ ಅವರೊಂದಿಗೆ, ಅನೂಪ್ ಭಂಡಾರಿ, ನಿರುಪ್ ಭಂಡಾರಿ, ಜಾಕ್ವೇಲಿನ್ ಫರ್ನಾಂಡೀಸ್, ಮಿಲನಾ ನಾಗರಾಜ್, ಸಿದ್ದು ಮೂಲಿಮನಿ, ನೀತಾ ಅಶೋಕ್, ಮಧುಸೂದನ ರಾವ್, ವಾಸುಕಿ ವೈಭವ್ ಮತ್ತು ರವಿಶಂಕರ ಗೌಡರಂತಹ ಕನ್ನಡದ ಖ್ಯಾತ ನಟ ನಟಿಯರು ಚಿತ್ರದಲ್ಲಿ ನಟಿಸಿದ್ದಾರೆ.

ನೂರಾರು ದೆಹಲಿ ಕನ್ನಡಿಗರು, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ, ಸಂಸದರಾದ ಡಾ. ಎಲ್ ಹನುಮಂತಯ್ಯ, ಶ್ರೀ ಅಣ್ಣಾಸಾಹೇಬ್ ಜೊಲ್ಲೆ, ಶ್ರೀ ಜಿ.ಸಿ. ಚಂದ್ರಶೇಖರ್, ಶ್ರೀ ಈರಣ್ಣ ಕಡಾಡಿ, ಶ್ರೀ ಕೆ. ನಾರಾಯಣ್, ಶ್ರೀ ರಾಜ ಅಮರೇಶ್ವರ ನಾಯಕ್, ಅವರ ಜೊತೆಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ್, ಪದಾಧಿಕಾರಿಗಳು, ಕುಟುಂಬದವರು, ದೆಹಲಿಯಲ್ಲಿ ಕಾರ್ಯನಿರತ ಐ.ಎ.ಎಸ್, ಐ.ಎಫ್.ಎಸ್, ಐ.ಆರ್.ಎಸ್ ಅಧಿಕಾರಿಗಳು, ಮಾಧ್ಯಮದವರು, ಚಿತ್ರ ಪ್ರೇಮಿಗಳು 'ವಿಕ್ರಾಂತ್ ರೋಣ' ಕನ್ನಡ ಚಲನಚಿತ್ರವನ್ನು ಸಂತೋಷದಿಂದ ವೀಕ್ಷಿಸಿ ಚಿತ್ರವು ನೂರು ದಿನಗಳ ಕಾಲ ಪ್ರದರ್ಶನ ಕಂಡು ಯಶಸ್ವಿಯಾಗಲೆಂದು ಶುಭ ಕೋರಿದರು. ಚಿತ್ರದ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟ ಕಿಚ್ಚ ಸುದೀಪ್ ಅವರ ಭಾವ ಶ್ರೀ ಸುರೇಶ ಮೋಹನ್ ಅವರಿಗೆ ಹಾಗು ಕೇಂದ್ರ ಮಂತ್ರಿ ಶ್ರೀ ಪ್ರಹ್ಲಾದ್ ಜೋಷಿ ಅವರ ವಿಶೇಷ ಕರ್ತವ್ಯಾಧಿಕಾರಿ ಶ್ರೀ ನಾರಾಯಣ್ ಗಂಭೀರ್ ಅವರಿಗೂ ದೆಹಲಿ ಕನ್ನಡಿಗರ ಪರವಾಗಿ ಧನ್ಯವಾದಗಳು.

**ಅಭಿಮತ ವರದಿ**

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 | ಸಂಚಿಕೆ 11

ಆಗಸ್ಟ್ 2022



**ಪ್ರಧಾನ ಸಂಪಾದಕ**

ಚಂದ್ರಶೇಖರ ಎನ್.ಪಿ.

**ಸಂಪಾದಕ ಮಂಡಳ ಸದಸ್ಯರು**

ಕೆ.ಎಸ್. ಮೂರ್ತಿ

ಅಮರೇಶ ದೊಡಮನಿ

ಯಲ್ಲಾಲಿಂಗ ಕೊಪ್ಪದ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**

ಸಿ.ಎಂ. ನಾಗರಾಜ

**ಉಪಾಧ್ಯಕ್ಷರು**

ಡಾ. ಎಂ.ಎಸ್. ಶಶಿ ಕುಮಾರ್

ಪೂಜಾ ಪಿ. ರಾವ್

**ಪ್ರಧಾನ ಕಾರ್ಯದರ್ಶಿ**

ಆರ್. ರೇಣುಕುಮಾರ್

**ಕೋಶಾಧಿಕಾರಿ**

ರಾಧಾಕೃಷ್ಣ

**ಜಂಟಿ ಕಾರ್ಯದರ್ಶಿಗಳು**

ಬಿ. ನಾರಾಯಣ

ಸುಮಿತಾ ಮುರಗೋಡ

**ಸಮಿತಿ ಸದಸ್ಯರು**

ಪ್ರಭಾಕರ ಮಡ್ಡಿತೋಟ್

ಶಿವಪ್ಪ ಎಂ

ಎ.ಟಿ. ಶ್ರೀನಿವಾಸ

ಮಾಲಿನಿ ಪ್ರಹ್ಲಾದ್

ಕೆ.ಎಸ್. ಮೂರ್ತಿ

ನವೀನ್ ಕುಮಾರ್ ವಿ.

ಸವಿತಾ ನೆಲ್ಲಿ

ಅಶ್ವಿನಿ ಬಿ.ಎಸ್.

ಸಂತೋಷ ಜೆ

ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮು ಅರಳ

ಡಿ.ವಿ.ಎಸ್. ಮೂರ್ತಿ

ಈಶ್ವರ ಮಡಿವಾಳ




## ಸಂಪಾದಕೀಯ

### ರೈರಂಗಪುರದಿಂದ ರೈಸಿನಾ ಹಿಲ್‌ವರೆಗಿನ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರ ಪಯಣ ಪ್ರಜಾಪ್ರಭುತ್ವದ ಯಶೋಗಾಥೆ

ಬಂಧುಗಳೇ ನಮಸ್ಕಾರ,

ಭಾರತ ಸ್ವಾತಂತ್ರ್ಯದ ಎಪ್ಪತ್ತೈದನೇ ವರ್ಷದ ಅಂಗವಾಗಿ ಆಚರಿಸುತ್ತಿರುವ **'ಆಜಾದಿ ಕಾ ಅಮೃತ್ ಮಹೋತ್ಸವ'**ದ ಈ ಐತಿಹಾಸಿಕ ಘಟ್ಟದಲ್ಲಿ 15 ನೇ ಘನತೆವೆತ್ತ ರಾಷ್ಟ್ರಪತಿಯಾಗಿ ಬುಡಕಟ್ಟು ಜನಾಂಗದ ಮಹಿಳೆ ಶ್ರೀಮತಿ ದ್ರೌಪದಿ ಮುರ್ಮು ಮೊದಲ ಬಾರಿಗೆ ಆಯ್ಕೆಯಾಗಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ನಿಮ್ಮೆಲ್ಲರ ಪರವಾಗಿ ನಮ್ಮ ಭವ್ಯ ಭಾರತ ದೇಶದ ಮೊದಲ ಪ್ರಜೆಯಾಗಿ ಆಯ್ಕೆಯಾದ ಎರಡನೇ ಮಹಿಳೆಯಾಗಿರುವ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಭಾರತ ಸಂವಿಧಾನದ ಮುಖ್ಯಸ್ಥರೂ ಆಗಿರುವ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಶ್ರೀ ಎನ್.ವಿ. ರಮಣ ಅವರಿಂದ ಪ್ರಮಾಣ ವಚನ ಸ್ವೀಕರಿಸಿ ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿ "ದೇಶದ ಬಡವರು ಕನಸುಗಳನ್ನು ಕಾಣಬಹುದು ಮತ್ತು ಅವುಗಳನ್ನು ಈಡೇರಿಸಬಹುದು ಎಂಬುದಕ್ಕೆ ನನ್ನ ಚುನಾವಣೆ ಸಾಕ್ಷಿಯಾಗಿದೆ. ನೀವು ನನಗೆ ನೀಡಿದ ಮತ ಈ ದೇಶದ ಕೋಟಿ ಕೋಟಿ ನಾಗರೀಕರು ನಿಮ್ಮ ಮೇಲಿಟ್ಟಿರುವ ಭರವಸೆಯ ದ್ಯೋತಕವಾಗಿದೆ. ನಾಗರೀಕರ ನಂಬಿಕೆ, ಆಕಾಂಕ್ಷೆ ಮತ್ತು ಆಶೋತ್ತರಗಳ ಪ್ರತೀಕವಾಗಿರುವ ಈ ಪವಿತ್ರ ಸಂಸತ್ತಿನಿಂದ ನಾನು ಈ ದೇಶದ ಎಲ್ಲ ಸಹ–ನಾಗರೀಕರನ್ನು ನಮ್ರತೆಯಿಂದ ಅಭಿನಂದಿಸುತ್ತೇನೆ" ಎಂದು ದೇಶ ಮತ್ತು ದೇಶವಾಸಿಗಳ ಬಗ್ಗೆ ತಮ್ಮ ಅಂತರಂಗದ ಕಳಕಳಿಯನ್ನು ವ್ಯಕ್ತಪಡಿಸಿದರು.

ರಾಷ್ಟ್ರಪತಿ ಆಯ್ಕೆಗೆ ನಡೆದ 2022ರ ಚುನಾವಣೆಯಲ್ಲಿನ ಒಟ್ಟು 4,809 ಮತದಾರರಲ್ಲಿ ರಾಜ್ಯಸಭೆಯಲ್ಲಿ ಖಾಲಿಯಿದ್ದ 5 ಸ್ಥಾನಗಳು ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಖಾಲಿಯಿದ್ದ 6 ಸ್ಥಾನಗಳು, ಮಹಾರಾಷ್ಟ್ರ ಮತ್ತು ಬಿಹಾರ ರಾಜ್ಯ ವಿಧಾನ ಸಭೆಗಳ ಇಬ್ಬರು ಸದಸ್ಯರ ಅನರ್ಹತೆಯಿಂದಾಗಿ 4796 ಚುನಾಯಿತ ಪ್ರತಿನಿಧಿಗಳು ಮತದಾನಕ್ಕೆ ಅರ್ಹರಾಗಿದ್ದರು. ಆದರೆ ಮತದಾನದಲ್ಲಿ ಪಾಲ್ಗೊಂಡಿದ್ದು 4754 ಸದಸ್ಯರು ಮಾತ್ರ. ಸಂಸದರಲ್ಲಿ ರಾಜ್ಯಸಭೆಯ 228 ಮತ್ತು ಲೋಕಸಭೆಯ 543 (ಒಟ್ಟು 771) ಮತದಾರರ ಪೈಕಿ 763 ಸಂಸದರು ಮತದಾನದಲ್ಲಿ ಪಾಲ್ಗೊಂಡರು. ಹಾಗೆಯೇ, ಒಟ್ಟು 4025 ರಾಜ್ಯ ವಿಧಾನ ಸಭೆಗಳ ಸದಸ್ಯರುಗಳ ಪೈಕಿ 3991 ಶಾಸಕರು ಮತ ಚಲಾಯಿಸಿದರು. ಕರ್ನಾಟಕದ ಎಲ್ಲ ಶಾಸಕರು ಮತ್ತು ಲೋಕಸಭೆ ಹಾಗೂ ರಾಜ್ಯಸಭಾ ಸದಸ್ಯರು ಮತದಾನ ಮಾಡಿರುವುದು ಹೆಮ್ಮೆಯ ಸಂಗತಿ.

ನಮ್ಮ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ಆದಿವಾಸಿ ಮಹಿಳೆಯಾಗಿದ್ದು ನಮ್ಮ ದೇಶದ ಲಿಂಗಾನುಪಾತವನ್ನು ನೋಡಿದರೆ ಆದಿವಾಸಿ ಜನಾಂಗದಲ್ಲಿ 1000 ಪುರುಷರಿಗೆ 990 ಹೆಣ್ಣು ಮಕ್ಕಳಿರುವ ಈ ಸಮುದಾಯವನ್ನು ಭಾರತದ ನೆಲದ ಪೂರ್ವಜರೆಂದೇ ಪರಿಗಣಿಸಲ್ಪಡಲಾಗಿದೆ. ತಾಯ್ನೆಲದ ಸಂಸ್ಕೃತಿ, ನೈಸರ್ಗಿಕ ಸಂಪತ್ತನ್ನು ಕಾಪಾಡಿ ಭಾರತವನ್ನು ಸ್ವತಂತ್ರ್ಯಗೊಳಿಸಲು, ಬ್ರಿಟೀಷರ ದಾಸ್ಯದಿಂದ ಮುಕ್ತ ಗೊಳಿಸಲು, ಬಿಲ್ಲು ಬಾಣಗಳನ್ನು ಎದೆಗೆರಿಸಿಕೊಂಡು ಹೋರಾಡಿ ಮಡಿದ ಆದಿವಾಸಿಗಳ ಸಂಖ್ಯೆಗೆ ಲೆಕ್ಕವಿಲ್ಲ. ಆದರೂ ಸ್ವಾತಂತ್ರ ಬಂದ ನಂತರದ ಈ 75 ವರ್ಷಗಳಲ್ಲಿ ಭಾರತದಲ್ಲಿ ಬಡತನ, ಅನಕ್ಷರತೆ, ಮಗ್ಧತನಗಳನ್ನ ಒಡಲಲ್ಲಿರಿಸಿಕೊಂಡು, ಹಸಿವಿನ ಜೊತೆ ಭದ್ರತೆಯ ಬುನಾದಿಯಿಲ್ಲದ ಬದುಕನ್ನು ಹುಟ್ಟಿನಿಂದ ಸಾವಿನವರೆಗೂ ನೆಲ ಸಂಸ್ಕೃತಿಯ ನಿಜದ ಪ್ರೀತಿಯಿಂದ ಬದುಕುತ್ತಿದೆ ಈ ಬುಡಕಟ್ಟು ಸಮುದಾಯ. ಒಂದು ಅಂದಾಜಿನ ಪ್ರಕಾರ ಭಾರತದಲ್ಲಿರುವ ಒಟ್ಟು ಖನಿಜ ಸಂಪತ್ತಿನ ಶೇಕಡ 52 ರಷ್ಟು ಭಾಗವನ್ನು ತನ್ನ ಒಡಲಲ್ಲಿಯೇ ಉದುಗಿಸಿಕೊಂಡಿರುವ ಅರಣ್ಯಗಳಲ್ಲಿಯೇ ಈ ಆದಿವಾಸಿಗಳು ಬದುಕು ಕಟ್ಟಿಕೊಂಡಿದ್ದಾರೆ.

ಆದಿವಾಸಿ ಸಮುದಾಯದ ಸಾಕ್ಷರತಾ ಪ್ರಮಾಣ 2011ರ ಜನಗಣತಿ ಪ್ರಕಾರ ಶೇ.59, ಬಡತನ ರೇಖೆಗಿಂತ ಕೆಳಗಿರುವ ಆದಿವಾಸಿಗಳ ಸಂಖ್ಯೆ ಶೇ.45. ಇನ್ನು ಅಪೌಷ್ಟಿಕತೆ, ಅನಾರೋಗ್ಯ ಮೊದಲಾದ ಸಮಸ್ಯೆಗಳಿಂದ ನೊಂದು ನಲುಗುತ್ತಿರುವ ಆದಿವಾಸಿ ಜನಾಂಗ ಬದುಕಿನುದ್ದಕ್ಕೂ, ಉಳ್ಳವರ, ಆಳುವವರ,ಅಧಿಕಾರಶಾಹಿಯ ಶೋಷಣೆ ಎಲ್ಲವನ್ನು ನುಂಗಿಕೊಂಡು ಬರುತ್ತಿದೆ. ಏನೆಲ್ಲ ಸಂಕಟಗಳ ನಡುವೆಯೂ ತಾಳ್ಮೆ ಮತ್ತು ಆತ್ಮವಿಶ್ವಾಸದಿಂದ ಮುನ್ನುಗ್ಗಿ, ಸಂವಿಧಾನದ ಮೇಲೆ ನಂಬಿಕೆಯಿಟ್ಟು **'ತಾಳ್ಮೆ ಎಂಬುದು ಕಹಿಯಾದ ಗಿಡ ಕಾದು ನೋಡಿದರೆ ಸಿಹಿಯಾದ ಫಲವನ್ನು ನೀಡುತ್ತದೆ'** ಎಂಬ ನಾಣ್ಣುಡಿಯಂತೆ ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕ ಹೀಗೆ ಎಲ್ಲ ದುಃಖ ದುಮ್ಮಾನಗಳನ್ನು ಸಹಿಸಿಕೊಂಡು, ಬದುಕಿ ನಡೆದು **'ಛಲ ಬಿಡದೆ ಫಲ ಪಡೆದ'** ದೇಶದ ಮೊದಲ ಪ್ರಜೆ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ದೇಶದ ದೀನ ದಲಿತರ, ಅವಕಾಶ ವಂಚಿತರ, ನೊಂದವರ ಪಾಲಿಗೆ ಭರವಸೆಯ ಹೊಂಗಿರಣವೇ ಆಗಿದ್ದಾರೆ.

ಇದಕ್ಕೆ ಪೂರಕವಾಗಿ, ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ "ಸಾಮಾಜಿಕ ಪ್ರಜಾಪ್ರಭುತ್ವವನ್ನು ಸಾಧಿಸದಿದ್ದರೆ ನಮ್ಮ ರಾಜಕೀಯ ಸ್ವಾತಂತ್ರ್ಯ ಅರ್ಥಹೀನ. ಒಬ್ಬ ವ್ಯಕ್ತಿಗೆ ಒಂದು ಓಟು, ಒಂದು ಓಟಿಗೆ ಒಂದು ಮೌಲ್ಯವನ್ನು ನಾವು ಸಾಧಿಸಿರಬಹುದು. ಆದರೆ ಪ್ರತಿಯೊಬ್ಬ ವ್ಯಕ್ತಿಗೂ ಒಂದೇ ಮೌಲ್ಯವೆಂಬ ಆದರ್ಶವನ್ನು ನಾವು ಸಾಧಿಸಬೇಕಿದೆ" ಎಂಬ ಮಾತುಗಳು ನಿಜವಾಗಬೇಕಾದರೆ ದೇಶದ ಪ್ರತಿಯೊಬ್ಬ ಪ್ರಜೆಗೂ ಎಲ್ಲ ಬಗೆಯ ಹಕ್ಕುಗಳನ್ನು ನೀಡಿ ಸಮಾನತೆಯ ತತ್ವ ಸಾರುವ, ವಿಶ್ವದಲ್ಲೇ ಅತಿ ದೊಡ್ಡ ಲಿಖಿತ ರೂಪದ ಸಂವಿಧಾನವಾಗಿರುವ ನಮ್ಮ ಭಾರತದ ಸಂವಿಧಾನವನ್ನು ಅಕ್ಷರಶಃ ಪಾಲಿಸಬೇಕು.

ಭಾರತದ ಸಶಸ್ತ್ರ ಪಡೆಗಳ ದಂಡನಾಯಕರಾಗಿರುವ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಓಡಿಸ್ಸಾದ ರೈರಂಗಪುರದ ನಗರ ಪಂಚಾಯತ್‌ನಿಂದ ರಾಷ್ಟ್ರ ರಾಜಧಾನಿ ನವದೆಹಲಿಯ ರೈಸಿನಾ ಹಿಲ್‌ನಲ್ಲಿರುವ ಕಣ್ಮನ ಸೂರೆಗೊಳ್ಳುವ ಆಧುನಿಕ ಭಾರತದ ಭವ್ಯ ಸೌಧ ರಾಷ್ಟ್ರಪತಿ ಭವನದವರೆಗೆ ಸಾಗಿಬಂದ ಯಶೋಗಾಥೆ **ನಾವು ಭಾರತೀಯರು, ಭಾರತ ನಮ್ಮದು ಎಂಬ ದೇಶಪ್ರೇಮ ಮತ್ತು ರಾಷ್ಟ್ರಪ್ರಜ್ಞೆ**ಯನ್ನು ಪ್ರತಿಯೊಬ್ಬ ನಾಗರೀಕನಲ್ಲೂ ಪ್ರಜ್ವಲಿಸಲು ನೆರವಾಗುತ್ತದೆ.

ಇನ್ನು, ಎಂದಿನಂತೆ ನಮ್ಮ ದೆಹಲಿ ಕರ್ನಾಟಕ ಸಂಘ ಅಮೃತ ಮಹೋತ್ಸವ ಸಂಭ್ರಮಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಸಾಂಸ್ಕೃತಿಕ ಉತ್ಸವ, ಆರೋಗ್ಯ ಮೇಳ, ವರ್ತಮಾನದಲ್ಲಿ ಕನ್ನಡದ ಸವಾಲುಗಳು–ವಿಚಾರ ಸಂಕಿರಣ, ಜನಕಪುರಿ ಕನ್ನಡ ಕೂಟದೊಂದಿಗಿನ ಕಾರ್ಯಕ್ರಮದ ವರದಿ, ಹತ್ತು ಮತ್ತು ಹನ್ನೆರಡನೇ ತರಗತಿಯಲ್ಲಿ ಅತ್ಯಧಿಕ ಅಂಕಗಳೊಂದಿಗೆ ಉತ್ತೀರ್ಣರಾದ ದೆಹಲಿ ಕರ್ನಾಟಕ ಸಂಘದ ಸದಸ್ಯರ ಮಕ್ಕಳ ಸಂದರ್ಶನವೂ ಸೇರಿದಂತೆ ಅನೇಕ ಬರಹಗಳನ್ನು ಹೊತ್ತ ಅಭಿಮತದ ಈ ಸಂಚಿಕೆಯನ್ನು ನಿಮ್ಮ ಕೈಗಿಡುತ್ತಿದ್ದೇವೆ.

ಧನ್ಯವಾದಗಳು.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 ಸಂಚಿಕೆ–11
ಆಗಸ್ಟ್–2022, ಬೆಲೆ ರೂ. 1

# ಅಧ್ಯಕ್ಷರ ನುಡಿ

ಆತ್ಮೀಯ ಕನ್ನಡ ಬಂಧುಗಳೇ,

ಸ್ವಾತಂತ್ರ್ಯ ಬಂದು 75ವರ್ಷಗಳು ತುಂಬಿದ ಸಂದರ್ಭದಲ್ಲಿ ಹೊಸದಾಗಿ ಆಯ್ಕೆಯಾದ ರಾಷ್ಟ್ರದ 15ನೇ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ರವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ನಮ್ಮ ರಾಷ್ಟ್ರ ವಿಶ್ವ ಗುರು ಆಗುತ್ತಿದೆ. ಒಬ್ಬ ಆದಿವಾಸಿ ಮಹಿಳೆ, ಒಂದು ಬುಡಕಟ್ಟು ಕುಟುಂಬದಿಂದ ಬಂದ ಮಹಿಳೆ ಇಂದು ಭಾರತ ದೇಶದ ರಾಷ್ಟ್ರಪತಿ ಆಗಿರೋದು ನಮ್ಮೆಲ್ಲರಿಗೂ ಖುಷಿ ತಂದಿದೆ. ಬಡ ಜನರ ಬಗ್ಗೆ ವಿಶೇಷ ಕಾಳಜಿ ಇರುವ ನಮ್ಮ ರಾಷ್ಟ್ರಪತಿಗಳಿಗೆ ಸಮಸ್ತ ಕನ್ನಡಿಗರ ಪರವಾಗಿ ಹಾರ್ದಿಕ ಶುಭಾಶಯಗಳು. ರಾಷ್ಟ್ರದ 14ನೇ ರಾಷ್ಟ್ರಪತಿಯಾಗಿ ತಮ್ಮ ಪೂರ್ಣ ಅವಧಿ ಕಾರ್ಯ ನಿರ್ವಹಿಸಿದ ಶ್ರೀ ರಾಮ್‌ನಾಥ್ ಕೋವಿಂದ್‌ರವರಿಗೂ ಧನ್ಯವಾದಗಳು.

ಹಾಗೆನೇ, ಭಾರತದ ನೂತನ ಉಪರಾಷ್ಟ್ರಪತಿಗಳಾಗಿ ಶ್ರೀ ಜಗದೀಪ್ ಧನ್‌ಕರ್‌ರವರು ಆಯ್ಕೆಯಾಗಿದ್ದಾರೆ. ಇವರಿಗೂ ಸಹ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಜೊತೆಗೆ ಉಪರಾಷ್ಟ್ರಪತಿಗಳ ಸಂಪೂರ್ಣ ಅವಧಿಯನ್ನು ಪೂರ್ಣಗೊಳಿಸಿ ಕನ್ನಡಿಗರಿಗೆ ಜೊತೆಯಾಗಿ ನಿಂತು ಒಳ್ಳೆಯ ಹೆಸರನ್ನು ಮಾಡಿದಂತಹ ಹಿಂದಿನ ಉಪರಾಷ್ಟ್ರಪತಿಗಳಾದ ಶ್ರೀ ವೆಂಕಯ್ಯ ನಾಯ್ಡು ಅವರಿಗೆ ಅನಂತ ಧನ್ಯವಾದಗಳು.

ಬಂಧುಗಳೇ, ದೆಹಲಿ ಕರ್ನಾಟಕ ಸಂಘಕ್ಕೆ ಎಪ್ಪತ್ತೈದು ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ ಸಂಘದ ಅಮೃತ ಮಹೋತ್ಸವ ವರ್ಷಾಚರಣೆ ಅಂಗವಾಗಿ ರಾಷ್ಟ್ರರಾಜಧಾನಿಯಲ್ಲಿ ಕನ್ನಡವನ್ನು ಉಳಿಸುವ, ಕನ್ನಡವನ್ನು ಬೆಳೆಸುವ, ವಿಶ್ವದ ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘ ಈಗ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಸದಸ್ಯರಿಗೆ ಅನುಕೂಲ ಆಗುವಂತಹ ಇತರೆ ಕಾರ್ಯಕ್ರಮಗಳನ್ನು ಕೆಲಸಗಳನ್ನು ಮಾಡುತ್ತಾ ಬರುತ್ತಿದೆ. ಇತ್ತೀಚೆಗೆ ಜುಲೈ 17ರಂದು ಉತ್ತಮವಾಗಿ ಆಯೋಜನೆಗೊಂಡ "ಆರೋಗ್ಯ ಮೇಳ" ದೆಹಲಿಯ ಕನ್ನಡ ಜನಗಳ ದೆಹಲಿ ಕರ್ನಾಟಕ ಸಂಘದ ಸದಸ್ಯರುಗಳ ಮನ ಗೆಲ್ಲುವಂತ ಕಾರ್ಯಕ್ರಮವಾಗಿತ್ತು. ಈ ಆರೋಗ್ಯ ಮೇಳದಲ್ಲಿ ದೆಹಲಿಯ ಪ್ರಸಿದ್ಧ ಹಿರಿಯ ವೈದ್ಯರು ಭಾಗಿಯಾಗಿ ಸದಸ್ಯರುಗಳಿಗೆ ಅನುಕೂಲವಾಗುವಂಥ ವೈದ್ಯಕೀಯ ಸಲಹೆಗಳನ್ನು ಔಷಧಿಗಳನ್ನು ಉಚಿತವಾಗಿ ನೀಡಿದ್ದಾರೆ. ಈ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಲು ಕಾರಣೀಭೂತರಾದಂತ ವೈದ್ಯರು. "ವೈದ್ಯ ನಾರಾಯಣೋ ಹರಿ" ಎಂಬಂತೆ ಅವರು ನೀಡಿದ ಸಮಯಕ್ಕೆ ಕೆಲಸಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಕಾರ್ಯಕ್ರಮದ ಯಶಸ್ಸಿನಲ್ಲಿ ಭಾಗಿಯಾದ ಮುಖ್ಯ ಅತಿಥಿಗಳು ಮತ್ತು ವೈದ್ಯರಾದ ಡಾ. ಪರ್ವತ ಗೌಡ, ಡಾ. ಅಶೋಕ್ ಎಂ.ಈಟಿ, ಡಾ. ವೆಂಕಟೇಶ್, ಡಾ. ನಿರಂಜನ್ ನಾಯಕ್, ಡಾ ಗುರುರಾಜ ಸಂಗೊಂದಿಮಠ, ಡಾ. ತ್ರಿವೇಣಿ, ಡಾ. ರೂಪಶ್ರೀ, ಡಾ. ಸುಮನ್ ಸಾಲೀಮಠ ಈ ಎಲ್ಲಾ ತಜ್ಞ ವೈದ್ಯರಿಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ನಾನು ಅನಂತಾನಂತ ಧನ್ಯವಾದಗಳನ್ನು ತಿಳಿಸಲು ಬಯಸುತ್ತೇನೆ. ಇದೇ ಸಂದರ್ಭದಲ್ಲಿ ರಕ್ತ ಪರೀಕ್ಷಾ ಶಿಬಿರಗಳಿಗೆ ಸಹಾಯ ಮಾಡಿದ ಮ್ಯಾಕ್ಸ್ ಲ್ಯಾಬ್ ತಂಡಕ್ಕೆ, ಇ.ಸಿ.ಜಿ. ಮತ್ತು ರಕ್ತದೊತ್ತಡ ಪರೀಕ್ಷೆಗಳಿಗೆ ಸಹಕಾರ ನೀಡಿದ ಎಲ್ಲಾ ವೈದ್ಯರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ವಿಶೇಷವಾಗಿ ಕೋವಿಡ್ ಲಸಿಕೆ ಮತ್ತು ಬೂಸ್ಟರ್ ಲಸಿಕೆಗಳನ್ನು ನೀಡಿದಂತಹ ವೈದ್ಯರಿಗೆ ಹಾಗೂ ಇದಕ್ಕೆ ಸಹಕಾರಿಯಾಗಿ ನಿಂತಂತಹ ನಮ್ಮ ಹಿರಿಯ ಐ.ಎ.ಎಸ್ ಅಧಿಕಾರಿಗಳಾದ ಶ್ರೀ ವೈಶಾಖ್ ನಾಗ್ ಅವರಿಗೆ ಧನ್ಯವಾದಗಳು. ಅದ್ಭುತವಾಗಿ ಯಶಸ್ವಿಯಾದ ಆರೋಗ್ಯ ಮೇಳದ ನಂತರ ನಮ್ಮ ಕನ್ನಡ ಮಕ್ಕಳಿಗೆ ಅನುಕೂಲವಾಗುವಂತಹ ಉದ್ಯೋಗ ಮೇಳ ಕಾರ್ಯಕ್ರಮವನ್ನೂ ಸಹ ಬರುವ ದಿನಗಳಲ್ಲಿ ಆಯೋಜನೆ ಮಾಡಲಾಗುವುದು. ಪ್ರಸಿದ್ಧ ಕಂಪೆನಿಗಳನ್ನು ಈ ಸಂದರ್ಭದಲ್ಲಿ ಆಹ್ವಾನಿಸಿ ನಮ್ಮ ಕನ್ನಡದ ಮಕ್ಕಳಿಗೆ ಅನುಕೂಲವಾಗುವಂತಹ ಕಾರ್ಯ ಮುಂದುವರಿಯಲಿದೆ.

ಆತ್ಮೀಯರೇ, ಕಳೆದ ಜುಲೈ 24 ರಂದು ಆಯೋಜನೆ ಗೊಂಡ ಕಲ್ಯಾಣ ಕರ್ನಾಟಕ ಜಿಲ್ಲೆಗಳ ಸಾಂಸ್ಕೃತಿಕ ಉತ್ಸವದಲ್ಲಿ ಉತ್ತಮವಾದ ಕಾರ್ಯಕ್ರಮಗಳು ಸುಮಾರು 11 ಗಂಟೆ ನಿರಂತರವಾಗಿ ನಡೆದು ದಾಖಲೆಯಾಗಿದೆ. ಎರಡೂವರೆ ಗಂಟೆ ಸಿನಿಮಾ ಮಂದಿರಗಳಲ್ಲಿ ಸಿನಿಮಾ ನೋಡುವುದು ಕಷ್ಟದ ಕೆಲಸವಲ್ಲ ಸಿನೆಮಾ ನೋಡುವ ಜನರ ಸಮಯದಲ್ಲಿ ಅಂದು ಪೂರ್ತಿ ದಿನ ತುಂಬಿದ ಸಂಘದ ಸಭಾಂಗಣದಲ್ಲಿ ಕಾರ್ಯಕ್ರಮಗಳು ನಡೆದು ಯಶಸ್ವಿಯಾಗಿದೆ. ಶ್ರೀ ಮಂಜು ಪಾಂಡವಪುರ ನಿರ್ದೇಶಿಸಿದ 'ಮಾತಂಗಿ ದೀವಟಿಗೆ' ಚಲನಚಿತ್ರ ಸಂಘದ ವೇದಿಕೆಯಲ್ಲಿ ಪ್ರದರ್ಶನಗೊಂಡು ದೆಹಲಿ ಕನ್ನಡಿಗರ ಪ್ರಶಂಸೆಗೆ ಪಾತ್ರವಾಗಿದೆ. ಕಲಬುರಗಿ ರಂಗಾಯಣ ತಂಡದವರಿಂದ ಪ್ರಸ್ತುತಿಗೊಂಡ ನಾಟಕ 'ಸಿರಿ ಪುರಂದರ' ಅತ್ಯುತ್ತಮ ನಾಟಕವಾಗಿ ಪ್ರದರ್ಶನವಾಗಿದ್ದು. ಪ್ರಸಿದ್ಧ ಗಾಯಕ ಶ್ರೀ ರಾಮಚಂದ್ರ ಹಡಪದ್‌ರವರ ಸುಗಮ ಸಂಗೀತ ಕಾರ್ಯಕ್ರಮ ಪ್ರೇಕ್ಷಕರ ಮನಗೆದ್ದಿದೆ. ಸಮಯ ಕಳೆದದ್ದು ತಿಳಿಯಲಿಲ್ಲ. ಡಾ. ಶುಭಾಂಗಿ ತಂಡದಿಂದ ಬಸವಣ್ಣನವರ ವಚನಗಳಿಗೆ ವಿಶೇಷವಾಗಿ ಸಮೂಹ ನೃತ್ಯ ಪ್ರದರ್ಶನ ಅದ್ಭುತವಾಗಿತ್ತು. ಕಲಾವಿದ ಶ್ರೀ ಬಸವರಾಜ್‌ರವರ ಕೂಚಿಪುಡಿ ನೃತ್ಯ ಸುಂದರವಾಗಿ ಮೂಡಿ ಬಂದಿತು. ಸಮಾರೋಪ ಕಾರ್ಯಕ್ರಮಕ್ಕೆ ಕೇಂದ್ರ ಮಂತ್ರಿಗಳಾದ ಶ್ರೀ ಭಗವಂತ ಖೂಬಾ ಆಗಮಿಸಿ ಕಲ್ಯಾಣ ಕರ್ನಾಟಕದ ಭಾಷೆ ಸಂಸ್ಕೃತಿ ಬಗ್ಗೆ ತುಂಬ ಸುಂದರವಾಗಿ ಮಾತನಾಡಿದ್ದಾರೆ. ಹಿರಿಯರಾದ ಬಳ್ಳಾರಿ ಕ್ಷೇತ್ರದ ಲೋಕಸಭಾ ಸದಸ್ಯ ಶ್ರೀ ದೇವೇಂದ್ರಪ್ಪನವರು ದೆಹಲಿ ಕರ್ನಾಟಕ ಸಂಘ ಮಾಡುತ್ತಿರುವ ಕೆಲಸಗಳ ಬಗ್ಗೆ ತುಂಬ ಖುಷಿ ಪಟ್ಟಿದ್ದಾರೆ. ಜೊತೆಗೆ ನಮ್ಮ ಕೆಲಸ ಕಾರ್ಯಗಳಿಗೆ ಕೈಜೋಡಿಸಲು ಸಮ್ಮತಿಸಿದ್ದಾರೆ. ಕಾರ್ಯಕ್ರಮಕ್ಕೆ ಬಂದಂತಹ ಗುಲ್ಬರ್ಗಾ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಉಮೇಶ್ ಜಾಧವ್‌ರವರು ಸಹ ಕಲ್ಯಾಣ ಕರ್ನಾಟಕ ಉತ್ಸವಕ್ಕೆ ರಾತ್ರಿಯ ಭೋಜನ ವ್ಯವಸ್ಥೆಯ ಖರ್ಚನ್ನು ಸ್ವತಃ ಸಂಸದರ ವತಿಯಿಂದ ನೀಡಿರುತ್ತಾರೆ. ಬರುವ ಸಂಘದ ಕಾರ್ಯಕ್ರಮಗಳಲ್ಲಿ ಜೊತೆ ನಿಲ್ಲಲು ಒಪ್ಪಿಗೆ ನೀಡಿದ್ದಾರೆ. ಇಂತಹ ಪ್ರೀತಿ ವಿಶ್ವಾಸ ಸಂಘದ ಬಗ್ಗೆ ಕಾಳಜಿ ತೋರಿಸಿದ ಎಲ್ಲ ಸಂಸದರಿಗೂ, ಮಂತ್ರಿಗಳಿಗೂ ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ಬಸವರಾಜ್ ಮತ್ತಿಮೂಡ್, ಶ್ರೀ ಅಪ್ಪುಗೌಡ ಪಾಟೀಲ್, ಶ್ರೀ ಸುಭಾಷ್ ಗುತ್ತೇದಾರ್‌ರವರಿಗೂ ಮತ್ತು ಕಾರ್ಯಕ್ರಮಕ್ಕೆ ಜೊತೆ ನೀಡಿದ ಎಲ್ಲಾ ಮಹನೀಯರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಬಂಧುಗಳೇ, ಆಗಸ್ಟ್ ತಿಂಗಳು 13 ಮತ್ತು 14 ರಂದು ಆಯೋಜನೆಯಾಗಲಿರುವ ಕರಾವಳಿ ಜಿಲ್ಲಾ ಸಾಂಸ್ಕೃತಿಕ ಉತ್ಸವಕ್ಕೆ ಹಾಗೂ ಮುಂಬರುವ ಸಂಘದ ಎಲ್ಲಾ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇನೆ.

*ಸಿ.ಎಂ. ನಾಗರಾಜ*
**ಅಧ್ಯಕ್ಷರು**

## ಮುನ್ನೋಟ

ಆತ್ಮೀಯರೇ,

ಸಂಘದ ಇತ್ತೀಚಿನ ಕಾರ್ಯಕ್ರಮಗಳಿಗೆ ತಾವುಗಳು ನೀಡಿದ ಸಹಕಾರ ಹಾಗೂ ಭಾಗವಹಿಸುವಿಕೆಗೆ ಸಮಸ್ತ ಕಾರ್ಯಕಾರಿ ಸಮಿತಿಯ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ.

ನಮ್ಮ ಆರೋಗ್ಯ ಮೇಳ ಹಾಗೂ ಕಲ್ಯಾಣ ಕರ್ನಾಟಕ ಜಿಲ್ಲಾ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮಗಳು ಊಹಿಸಿದ ರೀತಿಯೇ ಅತ್ಯಂತ ಯಶಸ್ವಿಯಾಗಿರುವುದು ನಮಗೆ ಅಭಿಮಾನದ ಸಂಗತಿ.

ನಮ್ಮ ಮುಂದಿನ ಕಾರ್ಯಕ್ರಮ ಕರಾವಳಿ ಜಿಲ್ಲೆಗಳ ಕಲಾ ಉತ್ಸವವಕ್ಕೂ ತಮ್ಮ ಈ ಪ್ರೀತಿ ಮುಂದುವರೆಯಲೆಂದು ಆಶಿಸುತ್ತಾ, ತಮ್ಮ ಆಗಮನಕ್ಕಾಗಿ ಕಾಯುತ್ತೇವೆ.

ಅಮೃತ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳಿಗೂ ಹೆಚ್ಚಿನ ಪ್ರಾಯೋಜನೆ ತಂದು ಸಂಘಕ್ಕೆ ಹೊರೆಯಾಗದ ರೀತಿ ಕಾರ್ಯ ನಿರ್ವಹಿಸುತ್ತಿರುವ ಸಮಿತಿಯ ಎಲ್ಲಾ ಸದಸ್ಯರು ಅಭಿನಂದನಾರ್ಹರು. ಇವರ ಈ ಪ್ರಯತ್ನದಿಂದಾಗಿಯೇ, ಕರ್ನಾಟಕ ಸರ್ಕಾರದ ಅನುದಾನ ಕಡಿತದ ಹೊರತಾಗಿಯೂ ದೆಹಲಿಯಲ್ಲಿ ಕನ್ನಡದ ಸಾಂಸ್ಕೃತಿಕ ಯಾತ್ರೆ ವಿಜೃಂಭಣೆಯಿಂದ ಸಾಗಿದೆ.

ಬನ್ನಿ, ಕೈ ಜೋಡಿಸಿ–ಸಹಕರಿಸಿ–ಆನಂದಿಸಿ.

***ಆರ್. ರೇಣುಕುಮಾರ್***
*ಪ್ರಧಾನ ಕಾರ್ಯದರ್ಶಿ*

## ಸಂಘದ ಮುಂಬರುವ ಕಾರ್ಯಕ್ರಮಗಳು

### ಆಗಸ್ಟ್ 13, 14, 2022

**ಅಮೃತ ಮಹೋತ್ಸವ ಸಂಭ್ರಮಾಚರಣೆ–ಸಂದರ್ಭದಲ್ಲಿ ಕರಾವಳಿ ಜಿಲ್ಲಾ ಸಾಂಸ್ಕೃತಿಕ ಉತ್ಸವ**

**ಆಗಸ್ಟ್ 13, 2022 ಬೆಳಿಗ್ಗೆ 11.00 ಗಂಟೆಗೆ**

ಚೆಂಡೆ ವಾದನ : ದುರ್ಗಾ ಚೆಂಡೆ ಬಳಗ ಶಿರ್ವ, ಮಹಿಳಾ ಕಲಾವಿದರಿಂದ

ನಾಟಕ : ಚೋಮನದುಡಿ : ಸುರಭಿ ರಿ. ಬೈಂದೂರು ಕಲಾವಿದರಿಂದ

ಹಾಸ್ಯ : ಶಾರದಾ ಆರ್ಟ್ಸ್ ಕಲಾವಿದರು (ರಿ), ಮಂಜೇಶ್ವರ

ಸುಗಮ ಸಂಗೀತ : ಕಲಾವತಿ ದಯಾನಂದ ತಂಡದ ಕಲಾವಿದರು, ಉಡುಪಿ

**ಆಗಸ್ಟ್ 14, 2022 ರಾತ್ರಿ 8.30 ರಿಂದ ಬೆಳಿಗ್ಗೆ 6.00ರವರೆಗೆ**

ದಕ್ಷಯಜ್ಞ ಮತ್ತು ಗದಾಯುದ್ಧ
ಯಕ್ಷಗಾನ (ಅಹೋರಾತ್ರಿ) ಸಾಲಿಗ್ರಾಮ ಮೇಳದಿಂದ

### ಆಗಸ್ಟ್ 15, 2022

**ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಧ್ವಜಾರೋಹಣ**

## ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದಿಂದ ರಾಷ್ಟ್ರೀಯ ಪ್ರಸಾರ ದಿನಾಚರಣೆ

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು (ರಿ) ದೆಹಲಿ ಘಟಕದ ವತಿಯಿಂದ ರಾಷ್ಟ್ರೀಯ ಪ್ರಸಾರ ದಿನಾಚರಣೆ ಕಾರ್ಯಕ್ರಮವನ್ನು ಜುಲೈ 23ರಂದು ನಿಸ್ತಂತು ಮಾಧ್ಯಮದ ಮೂಲಕ ಆಯೋಜಿಸಲಾಗಿತ್ತು.

ಮಂಗಳೂರು ಆಕಾಶವಾಣಿ ನಿವೃತ್ತ ನಿಲಯ ನಿರ್ದೇಶಕರು, ಕವಿ ಹಾಗೂ ಸಾಹಿತಿಯಾದ ಡಾ. ವಸಂತ ಕುಮಾರ್ ಪೆರ್ಲ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ 1921ರಿಂದ ಬಾನುಲಿ ಮಾಧ್ಯಮದ ಚರಿತ್ರೆ ಆರಂಭವಾಗುತ್ತದೆ. ಆರಂಭದಲ್ಲಿ ತಾಂತ್ರಿಕ ಕಾರಣಗಳಿಂದ ಅಡೆತಡೆಯಾದರೂ ಮುಂದೆ 1927ರ ಬಳಿಕ ಅಬಾಧಿತವಾದ ಚರಿತ್ರೆ ಪ್ರಸಾರ ಮಾಧ್ಯಮದ್ದಾಗಿದೆ. ಪ್ರಸಾರ ಮಾಧ್ಯಮಕ್ಕೆ ಆಕಾಶವಾಣಿ ಎನ್ನುವ ಹೆಸರು ಕೊಟ್ಟ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ.

1950ರ ಸುಮಾರಿಗೆ ಆಲ್ ಇಂಡಿಯಾ ರೇಡಿಯೋ ಹೆಸರನ್ನು ಬಿಟ್ಟು ಆಕಾಶವಾಣಿ ಎನ್ನುವ ಹೆಸರು ಪ್ರಚಲಿತಕ್ಕೆ ಬರುತ್ತದೆ. 1950–90 ಸುಮಾರು 40 ವರ್ಷಗಳ ಯಾತ್ರೆ ಅವಿಸ್ಮರಣೀಯ. ಆರಂಭದಲ್ಲಿ 8–10 ಆಕಾಶವಾಣಿ ಕೇಂದ್ರಗಳಿದ್ದು, 1990ರ ಹೊತ್ತಿಗೆ 24 ದೇಶಿ ಭಾಷೆಗಳಲ್ಲಿ, 10 ವಿದೇಶಿ ಭಾಷೆಗಳಲ್ಲಿ 320 ಕೇಂದ್ರಗಳನ್ನು ಹೊಂದುತ್ತದೆ. ಗುಣಮಟ್ಟದ ಕೇಳ್ಮೆಗಾಗಿ 1990ರ ದಶಕದ ನಂತರ ಜಿಲ್ಲಾಕೇಂದ್ರಗಳಲ್ಲಿ ಎಫ್.ಎಂ. ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. 2003ರ ನಂತರ ಎಫ್. ಎಂ. ಅನ್ನು ಖಾಸಗಿಯವರಿಗೆ ವಿತರಿಸಲಾಗುತ್ತಿದೆ. ಆಕಾಶವಾಣಿಯು ಭಾರತೀಯ ಸಂಗೀತ ಪರಂಪರೆಗೆ, ಕೃಷಿರಂಗಕ್ಕೆ ಮಾತ್ರವಲ್ಲ, ರಾಷ್ಟ್ರೀಯ ಅಭಿವೃದ್ಧಿಗೆ ನೀಡಿದ ಕೊಡುಗೆ ಅನುಪಮವಾದುದು. ಭಾರತ ದೇಶದ ಒಟ್ಟು ಅಭಿವೃದ್ಧಿಯಲ್ಲಿ ಮಾಧ್ಯಮಗಳ ಪಾತ್ರ ಬಹು ದೊಡ್ಡದು. ಆಕಾಶವಾಣಿಗೆ ವಿದ್ಯಾವಂತರು/ಅವಿದ್ಯಾವಂತರು ಎಂಬ ಭೇದವಿಲ್ಲ. ಆಕಾಶವಾಣಿಯು ಭಾರತೀಯ ಶೈಕ್ಷಣಿಕ, ಸಾಂಸ್ಕೃತಿಕ ಲೋಕಕ್ಕೆ ನೀಡಿದ ಕೊಡುಗೆಯಂತೆ ಬೇರೆ ಯಾವ ಮಾಧ್ಯಮವು ನೀಡಲಿಲ್ಲ ಎಂದು ಹೇಳಿದರು.

ಇನ್ನೊರ್ವ ಮುಖ್ಯ ಅತಿಥಿಯಾಗಿದ್ದ ರೇಡಿಯೋ ಸಾರಂಗ್, ಮಂಗಳೂರು ಇದರ ಕಾರ್ಯಕ್ರಮ ನಿರ್ವಾಹಕರಾದ ಆರ್‌ಜೆ ಅಭಿಷೇಕ್ ಶೆಟ್ಟಿ ಅವರು ಮಕ್ಕಳನ್ನುದ್ದೇಶಿಸಿ ಮಾತನಾಡಿ ಕರ್ನಾಟಕದಲ್ಲಿ ಸುಮಾರು 22 ಸಮುದಾಯ ಬಾನುಲಿಗಳು ಕಾರ್ಯನಿರ್ವಹಿಸುತ್ತಿವೆ. ಸಮುದಾಯ ಬಾನುಲಿಗಳು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತವೆ. ಧ್ವನಿ ಇಲ್ಲದವರಿಗೆ ದನಿ ಕೊಡುವ ಶಕ್ತಿಯನ್ನು ಬಾನುಲಿ ಕೊಡುತ್ತದೆ. ಒಳ್ಳೆಯ ಮಾತುಗಾರರಾಗಬೇಕಾದರೆ ಮೊದಲು ಒಳ್ಳೆಯ ಕೇಳುಗನಾಗಿರಬೇಕು ಎಂಬ ಮಾತಿದೆ. ಅಂತೆಯೇ ನೀವೆಲ್ಲರೂ ಒಳ್ಳೆಯ ಕೇಳುಗರಾಗಿ ಜೀವನದಲ್ಲಿ ಯಶಸ್ವಿಯಾಗಿ ಮುನ್ನಡೆಯಿರಿ ಎಂದು ಹೇಳಿದರು.

ಕು। ಸುಮಂತ್ ಆಚಾರ್ಯ ಚಿಂತನಾ ಲಹರಿ, ಕು। ಸೃಜನ್ ಆರ್. ದೆಹಲಿ ವಾರ್ತೆ ವಾಚನ ಕು। ವರ್ಣಿಕಾ, ಕು। ಮೊಹಮ್ಮದ್ ಸಾಹಿಲ್, ಕು। ಜೈನಬ್ ಭಾವಗೀತೆ, ಕು। ನಂದಿತಾ ಉಭಾಳೆ, ಕು। ಹರ್ಷಿತಾ ಉಭಾಳೆ ಚಿತ್ರಗೀತೆ, ಕು। ಹಾಸಿನಿ ವಿಜ್ಞಾಪನೆ, ಕು। ಧೈರ್ಯ ಜೇವೂರ್ ಕರುನಾಡ ವಾರ್ತೆ ವಾಚನ, ಕು। ಅಪೇಕ್ಷಾ ಮಾರುಕಟ್ಟೆ ಬೆಲೆ ಧಾರಣೆ, ಕು। ಅವನಿ ನೆಲ್ಲಿ ನೀತಿ ಕಥೆಯನ್ನು ಪ್ರಸ್ತುತಪಡಿಸಿದರು. ಉದ್ಘೋಷಕರಾಗಿ ಕು। ನೀಕ್ಷಿತ್ ಕೆ. ಗಮನ ಸೆಳೆದರು. ಮಕ್ಕಳು ನೀಡಿದ ಪೂರ್ತಿ ಕಾರ್ಯಕ್ರಮವು ಆಕಾಶವಾಣಿ ನಿಲಯದಲ್ಲಿ ಮೂಡಿ ಬರುವ ಕಾರ್ಯಕ್ರಮದ ಮಾದರಿಯಲ್ಲಿದ್ದುದು ಹಾಗೂ ಶ್ರಾವ್ಯ ಮಾಧ್ಯಮದಲ್ಲಿದ್ದುದು ವಿಶೇಷ.

ಪರಿಷತ್ತಿನ ಸದಸ್ಯರಾದ ನಾಗರಾಜ ಎಂ. ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಅಧ್ಯಕ್ಷರಾದ ಅರವಿಂದ ಬಿಜ್ಜೈ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಉಪಾಧ್ಯಕ್ಷೆ ಮಾಲಿನಿ ಪ್ರಹ್ಲಾದ್ ಹಾಗು ಸಂಚಾಲಕರಾದ ಎಂ. ಗೋಪಾಲಕೃಷ್ಣ ಭಟ್ ಅತಿಥಿಗಳನ್ನು ಪರಿಚಯಿಸಿದರು. ಕು। ಸಾಯಿಶ್ರೀ ದೇಸಾಯಿ ದೇಶಭಕ್ತಿಗೀತೆಯನ್ನು ಪ್ರಸ್ತುತಪಡಿಸಿದರು. ಪರಿಷತ್ತಿನ ಉಪಾಧ್ಯಕ್ಷರಾದ ಕೆ.ಎಸ್. ಮೂರ್ತಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀಮತಿ ರತ್ನ ವಂದಿಸಿದರು. ಕು। ಜಯಶ್ರೀ ಎಸ್. ಕಾರ್ಯಕ್ರಮ ನಿರೂಪಿಸಿದರು.

***ಅರವಿಂದ ಬಿಜ್ಜೈ***

# ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾದ
# ದೆಹಲಿ ಕರ್ನಾಟಕ ಸಂಘದ ಯಶಸ್ವೀ ಆರೋಗ್ಯ ಮೇಳ



ಸದಾ ನವನವೀನ ಪರಿಕಲ್ಪನೆ ಮತ್ತು ಹೊಚ್ಚಹೊಸತನದಿಂದ ಕೂಡಿದ ಕಾರ್ಯಕ್ರಮಗಳೊಂದಿಗೆ ದೆಹಲಿ ಕನ್ನಡಿಗರ ಆಶಯದಂತೆ ದೆಹಲಿ ಕರ್ನಾಟಕ ಸಂಘವು ವೈದ್ಯ ನಾರಾಯಣನಾಗಿ ತನ್ನ ಕಾರ್ಯ ಚಟುವಟಿಕೆಗಳಲ್ಲಿ ಒಂದು ಚಿತ್ತಾರ ಮೂಡಿಸುವ ಕಾರ್ಯ ಮಾಡಿದೆ. ದೆಹಲಿ ಕರ್ನಾಟಕ ಸಂಘವು ತನ್ನ ಸ್ಥಾಪನೆಯಾಗಿ 75 ವರ್ಷಗಳನ್ನು ಪೂರ್ತಿಗೊಳಿಸಿದೆ. ಈ ಸವಿನೆನಪಿಗಾಗಿ 'ಅಮೃತ ಮಹೋತ್ಸವ' ಆಚರಣೆ ನಡೆದಿದೆ. ಹಲವು ವೈವಿಧ್ಯ ಹಾಗೂ ಭಿನ್ನ-ವಿಭಿನ್ನ ರೀತಿಯ ಕನ್ನಡ ಕಾರ್ಯಕ್ರಮ ರೂಪಿಸಿ, ತಾಯ್ನಾಡಿನ ವಿವಿಧ ಜಿಲ್ಲೆಯ ಗ್ರಾಮೀಣ ಕಲೆಗಳು ಸಂಘದ ವೇದಿಕೆಯಲ್ಲಿ ಅನಾವರಣಗೊಳ್ಳುತ್ತಿವೆ. ಕನ್ನಡದ ಕಂಪು ಪಸರಿಸುವ ಸಂಘದ ಯೋಜನಾಬದ್ಧ ಕಾರ್ಯಗಳು ಸಾಂಗವಾಗಿ ಮುಂಬರುವ 2023ನೇ ವರ್ಷದ ಮಾರ್ಚ್ ಅಂತ್ಯದವರೆಗೂ ಮುನ್ನಡೆಯಲಿವೆ.

ಇದರಂಗವಾಗಿ, ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜುಲೈ 17ರಂದು ದೆಹಲಿ ಕನ್ನಡಿಗರಿಗಾಗಿ 'ಆರೋಗ್ಯ ಮೇಳ' ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು ಮುನ್ನೂರಕ್ಕೂ ಹೆಚ್ಚಿನ ದೆಹಲಿ ಕನ್ನಡಿಗರು ಪಾಲ್ಗೊಂಡು, ದೆಹಲಿಯ ವಿವಿಧ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕನ್ನಡದ ವೈದ್ಯರ ಜೊತೆ ಕನ್ನಡದಲ್ಲಿಯೇ ತಮ್ಮ ಆರೋಗ್ಯ ಸಮಸ್ಯೆಗಳನ್ನು ಹೇಳಿಕೊಂಡು ಚಿಕಿತ್ಸೆ, ಸಲಹೆ ಪಡೆದು, ಅಗತ್ಯ ವೈದ್ಯಕೀಯ ತಪಾಸಣೆ ಉಚಿತವಾಗಿ ಮಾಡಿಸಿಕೊಂಡು ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಇದೇ ಸಂದರ್ಭದಲ್ಲಿ ಮ್ಯಾಕ್ಸ್ ಲ್ಯಾಬ್ ಆರೋಗ್ಯ ಸಂಸ್ಥೆಯ ವತಿಯಿಂದ ಮಧುಮೇಹ ಹಾಗೂ ಕೋಲೆಸ್ಟ್ರಾಲ್‌ಗೆ ಸಂಬಂಧಿಸಿದಂತೆ ರಕ್ತಪರೀಕ್ಷೆಗಳನ್ನು ಉಚಿತವಾಗಿ ಮಾಡುವ ವ್ಯವಸ್ಥೆಗೊಳಿಸಲಾಗಿತ್ತು. ಕಳೆದೆರಡು ವರ್ಷಗಳಲ್ಲಿ ಇಡೀ ಜಗತ್ತಿನ ಆರೋಗ್ಯ ವ್ಯವಸ್ಥೆಯನ್ನೇ ತಲೆಕೆಳಗು ಮಾಡಿದ್ದ ಕೋವಿಡ್ ಮಾರಕ ರೋಗದಿಂದ ಮುಕ್ತವಾಗಲು ಸರ್ಕಾರ ಘೋಷಿಸಿರುವ ಕೋವ್ಯಾಕ್ಸಿನ್ ಹಾಗೂ ಕೋವಿಶೀಲ್ಡ್‌ನ ಒಂದನೇ / ಎರಡನೇ ಲಸಿಕೆಗಳನ್ನು ಮತ್ತು ಬೂಸ್ಟರ್ ಡೋಸ್ ಲಸಿಕೆಯನ್ನು ಉಚಿತವಾಗಿ ನೀಡಲಾಯಿತು. ಬೆಳಿಗ್ಗೆ ಮಳೆಯ ಕಾರಣದಿಂದ ಒಂದು ಗಂಟೆ ತಡವಾಗಿ ಆರಂಭಗೊಂಡ ಆರೋಗ್ಯ ಮೇಳವನ್ನು ಉಪಸ್ಥಿತರಿದ್ದ ವೈದ್ಯರುಗಳಿಂದ ದೀಪ ಬೆಳಗಿಸುವ ಮೂಲಕ ಆರಂಭಿಸಲಾಯಿತು.

ಆರೋಗ್ಯ ಮೇಳ ಕಾರ್ಯಕ್ರಮಕ್ಕೆ ಆಗಮಿಸಿದ ತಜ್ಞ ವೈದ್ಯರುಗಳನ್ನು, ಕೋವಿಡ್ ಲಸಿಕೆ ನೀಡಲು ಬಂದ ತಂಡಗಳನ್ನು ಮತ್ತು ಆರೋಗ್ಯ ಸಹಾಯಕರನ್ನು ಹಾಗೂ ಉಪಸ್ಥಿತರಿದ್ದ ದೆಹಲಿ ಕನ್ನಡಿಗರನ್ನು ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಅವರು ಸ್ವಾಗತಿಸುತ್ತಾ, ಸಂಘದ ಅಮೃತ ಮಹೋತ್ಸವ ಸಂಭ್ರಮಾಚಾರಣೆಯ ಅಂಗವಾಗಿ ಈ ಆರೋಗ್ಯ ಮೇಳವನ್ನು ದೆಹಲಿ ಕನ್ನಡಿಗರ ಹಿತ ದೃಷ್ಟಿಯಿಂದ ಆಯೋಜಿಸಲಾಗಿದೆ, ಇದರ ಪೂರ್ಣ ಪ್ರಯೋಜನ ದೆಹಲಿ ಕನ್ನಡಿಗರು ಪಡೆದುಕೊಳ್ಳುವುರಾಗಿ ಆಶಯ ವ್ಯಕ್ತಪಡಿಸಿದರು.

ಹೃದಯ ತಜ್ಞ ಡಾ. ಪರ್ವತ ಗೌಡ ಅವರು ಹೃದಯ ಸಂಬಂಧಿ ರೋಗದ ಬಗ್ಗೆ, ಡಾ. ನಿರಂಜನ್ ನಾಯಕ್ ಅವರು ಕ್ಯಾನ್ಸರ್ ರೋಗದ ಬಗ್ಗೆ, ಡಾ. ಗುರುರಾಜ್ ಸಂಗೊಂದಿಮಠ ಅವರು ಬೆನ್ನುಮೂಳೆ, ಕುತ್ತಿಗೆ, ಮಂಡಿ ಕೀಲು ನೋವುಗಳ ಬಗ್ಗೆ, ಡಾ. ವೆಂಕಟೇಶ್ ಸಾಮಾನ್ಯ ಆರೋಗ್ಯ ಹಾಗೂ ಅಗತ್ಯ ಔಷಧಿಗಳ ಬಗ್ಗೆ, ಡಾ. ಸುಮನ್ ಸಾಲೀಮಠ ಅವರು ಮಹಿಳೆಯರಿಗೆ ರೇಡಿಯೋಲಜಿ, ಡಾ. ತ್ರಿವೇಣಿ ಅವರು ಮಹಿಳೆಯರ ಆರೋಗ್ಯ ಸಮಸ್ಯೆಗಳ ಬಗ್ಗೆ ಅಗತ್ಯ ವೈದ್ಯಕೀಯ ಸಲಹೆ ಸೂಚನೆ ನೀಡಿದರು. ಡಾ. ಅಶೋಕ್ ಎಂ.ಈಟಿ ಹಾಗೂ ಡಾ. ರೂಪಶ್ರೀ ಅವರು ಆಯುರ್ವೇದ ಚಿಕಿತ್ಸೆ ಕುರಿತ ಮಾಹಿತಿ ಹಾಗು ಅಗತ್ಯ ಸಲಹೆಗಳನ್ನು ನೀಡುತ್ತಾ ಆಯುರ್ವೇದ ಔಷಧಿಯನ್ನು ಉಚಿತವಾಗಿ ದೆಹಲಿ ಕನ್ನಡಿಗರಿಗೆ ವಿತರಿಸಿದರು.

ಆರೋಗ್ಯ ಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಉಚಿತ ಸೇವೆ ಸಲ್ಲಿಸಿದ ಎಲ್ಲ ವೈದ್ಯರುಗಳಿಗೆ ಸಂಘದ ವತಿಯಿಂದ ಸ್ಮರಣಿಕೆ ನೀಡಿ ಶಾಲು ಹೊದಿಸಿ ಗೌರವಿಸಲಾಯಿತು. ಸನ್ಮಾನ ಮಾಡಿದ ನಂತರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಐ.ಆರ್.ಎಸ್. ಅಧಿಕಾರಿ ಡಾ. ಕೆ.ಎಂ. ಮಹೇಶ್ ಅವರು ಮಾತನಾಡಿ ಸಂಘದಲ್ಲಿ ಬಹಳ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದು, ಈಗ ಆಯೋಜಿಸಿರುವ ಆರೋಗ್ಯ ಮೇಳ ನಿಜಕ್ಕೂ ಶ್ಲಾಘನೀಯವಾದುದು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ನಮ್ಮ ಕನ್ನಡಿಗ ವೈದ್ಯರುಗಳನ್ನು ಈ ಸೇವೆಯಲ್ಲಿ ತೊಡಗಿಸಿಕೊಂಡು ಕನ್ನಡಿಗರಿಗೆ ಅನುಕೂಲ ಕಲ್ಪಿಸಬೇಕೆಂದು ಹೇಳುತ್ತಾ



ಕಾರ್ಯಕಾರಿ ಸಮಿತಿಯ ಈ ಪ್ರಯತ್ನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ವೈದ್ಯರೆಲ್ಲರ ಪರವಾಗಿ ಮಾತನಾಡಿದ ಡಾ. ನಿರಂಜನ್ ನಾಯಕ್ ಅವರು ಆಧುನಿಕ ಜೀವನದ ಒತ್ತಡದಲ್ಲಿ ಜನರ ಆರೋಗ್ಯ ಬಹಳ ಕ್ಷೀಣಿಸುತ್ತಿದ್ದು, ಜನರ ಉತ್ತಮ ಆರೋಗ್ಯಕ್ಕಾಗಿ ಈ ರೀತಿಯಾದ ಆರೋಗ್ಯ ಶಿಬಿರಗಳು ಎರಡು ಮೂರು ತಿಂಗಳಿಗೊಮ್ಮೆ ಏರ್ಪಡಿಸಬೇಕು ಎಂದು ಸಲಹೆ ನೀಡಿದರು. ಅಲ್ಲದೇ ಕನ್ನಡಿಗರಾದ ತಮಗೆ ದೆಹಲಿ ಕನ್ನಡಿಗರ ಸೇವೆ ಮಾಡಲು ಸಿಕ್ಕ ಅವಕಾಶಕ್ಕಾಗಿ ಹರ್ಷಿಸಿದರು. ತಮ್ಮನ್ನು ಈ ಸಂದರ್ಭದಲ್ಲಿ ಆಹ್ವಾನಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಮತ್ತು ಎಲ್ಲಾ ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ಸಮರ್ಪಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಸಂಘ ಆಯೋಜಿಸಿದ ಆರೋಗ್ಯ ಮೇಳದಲ್ಲಿ ಭಾಗವಹಿಸಿ ತಮ್ಮ ನಿಸ್ವಾರ್ಥ ಸೇವೆಯನ್ನು ನೀಡಿದ ಎಲ್ಲ ಕನ್ನಡಿಗ ವೈದ್ಯರಿಗೆ, ಅರೋಗ್ಯ ತಜ್ಞರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಕೃತಜ್ಞತೆ ಅರ್ಪಿಸಿದರು. ವೈದ್ಯಕೀಯ ವೃತ್ತಿ ಒತ್ತಡದ ಮಧ್ಯೆಯೂ ದೆಹಲಿ ಕನ್ನಡಿಗರಿಗಾಗಿ ನಮ್ಮ ಹೆಮ್ಮೆಯ ಕನ್ನಡಿಗ ತಜ್ಞ ವೈದ್ಯರು ಆರೋಗ್ಯ ಮೇಳದಲ್ಲಿ ದಿನವಿಡೀ ಸಮಯ ನೀಡಿರುವುದು ಶ್ಲಾಘನೀಯ, ಸಂಘ ಅವರುಗಳಿಗೆ ಚಿರಋಣಿಯಾಗಿದೆ ಎಂದರು.

ಉಚಿತ ರಕ್ತಪರೀಕ್ಷೆ, ಆರೋಗ್ಯ ತಪಾಸಣೆ ನಡೆಸಿಕೊಟ್ಟ ಮ್ಯಾಕ್ಸ್ ಲ್ಯಾಬ್ ತಂಡವರಿಗೆ ಮತ್ತು ಉಚಿತ ಕೋವಿಡ್ ಲಸಿಕೆ ನೀಡಲು ಸಹಕರಿಸಿದ ನವದೆಹಲಿ ಜಿಲ್ಲೆ ಕೋವಿಡ್ ಲಸಿಕೆ ವಿಭಾಗದ ವಿಶೇಷ ಕರ್ತವ್ಯಾಧಿಕಾರಿ ಶ್ರೀ ವೈಶಾಖ್ ನಾಗ್ ಹಾಗು ನವದೆಹಲಿ ಜಿಲ್ಲಾ ಆಡಳಿತದ ತಂಡಕ್ಕೆ ಧನ್ಯವಾದಗಳನ್ನು ತಿಳಿಸಿದರು. ಇಂದಿನ ಆರೋಗ್ಯ ಮೇಳ ಯಶಸ್ವಿಯಾಗಿದ್ದನ್ನು ಮನಗಂಡು ಮುಂಬರುವ ದಿನಗಳಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಇಂತಹ ಆರೋಗ್ಯ ಮೇಳಗಳನ್ನು ದೆಹಲಿ ಕನ್ನಡಿಗರಿಗಾಗಿ ಏರ್ಪಡಿಸುವ ಚಿಂತನೆ ಸಂಘಕ್ಕಿದೆ. ಈ ಬಗ್ಗೆ ಚರ್ಚಿಸಿ ನಿರ್ಧರಿಸಲಾಗುವುದು ಎಂದು ಹೇಳಿದರು.

ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿ ಕುಮಾರ್ ಅವರು, ವೈದ್ಯರನ್ನು ದೇವರಿಗೆ ಹೋಲಿಸುತ್ತಾ ಮೆಚ್ಚುಗೆ ನುಡಿಗಳನ್ನಾಡಿದರು. ಸಂಘದ ಪದಾಧಿಕಾರಿಗಳು, ಸದಸ್ಯರು ಸೇರಿದಂತೆ ಅಪಾರ ಸಂಖ್ಯೆ ಯಲ್ಲಿ ದೆಹಲಿ ಕನ್ನಡಿಗರು ಆರೋಗ್ಯ ಮೇಳ ದಲ್ಲಿ ಭಾಗಿಯಾಗಿ ಆರೋಗ್ಯ ಸಲಹೆಗಳನ್ನು ಪಡೆದುಕೊಂಡರು. ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜಿಸಿದ ಈ ಆರೋಗ್ಯ ಮೇಳ ಜನಮೆಚ್ಚುಗೆ ಪಡೆದ ಯಶಸ್ವಿ ಕಾರ್ಯಕ್ರಮವಾಯಿತು.

***ಅಭಿಮತ ವರದಿ***















# ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಸಂಘದ ಸಹಯೋಗದೊಂದಿಗೆ
# 'ಜನಕಪುರಿ ಕನ್ನಡ ಕೂಟದ ವಾರ್ಷಿಕೋತ್ಸವ' ಆಚರಣೆ



ದೂರದ ತಾಯ್ನಾಡಿನಿಂದ ಬಂದು ದೆಹಲಿ ಹಾಗೂ ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ನೆಲಸಿರುವ ಕನ್ನಡಿಗರೆಲ್ಲರೂ ತಮ್ಮ ದೈನಂದಿನ ಕೆಲಸ ಕಾರ್ಯಗಳ ಒತ್ತಡಗಳ ಮಧ್ಯೆಯೂ ಕನ್ನಡ ನಾಡು, ನುಡಿ ಹಾಗೂ ಸಂಪದ್ಭರಿತ ಸಂಸ್ಕೃತಿಯನ್ನು ಬಳಸುವುದರೊಂದಿಗೆ ಬೆಳೆಸುವ ಕಾರ್ಯದಲ್ಲಿ ದೆಹಲಿಯಲ್ಲಿ ಸ್ಥಾಪಿತ ಹಲವು ಸಂಘ ಸಂಸ್ಥೆಗಳು ತಮ್ಮನ್ನು ತಾವು ತೊಡಗಿಸಿಕೊಂಡು ಆ ನಿಟ್ಟಿನಲ್ಲಿ ಕನ್ನಡದ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತ್ತಿವೆ. ಅಂತಹ ಸಂಘ ಸಂಸ್ಥೆಗಳಲ್ಲಿಯೇ ನಾಲ್ಕು ದಶಕಕ್ಕಿಂತಲೂ ಹೆಚ್ಚಿಗೆ ದೆಹಲಿಯಲ್ಲಿ ತನ್ನ ಕಾರ್ಯ ಮಾಡುತ್ತಾ ಬರುತ್ತಿರುವ 'ಜನಕಪುರಿ ಕನ್ನಡ ಕೂಟ'ವೂ ಒಂದಾಗಿದೆ. ಅವುಗಳೊಂದಿಗೆ ಕೈಜೋಡಿಸಿ ಅಗತ್ಯ ಸಹಕಾರ ಮತ್ತು ನೆರವು ನೀಡುತ್ತಾ ಬಂದಿರುವ 75 ನೇ ವರ್ಷಕ್ಕೆ ಕಾಲಿಟ್ಟಿರುವ ದೆಹಲಿ ಕರ್ನಾಟಕ ಸಂಘ ತನ್ನ ಅಮೃತ ಮಹೋತ್ಸವ ಆಚರಣೆಯ ಈ ವರ್ಷ ಸ್ಥಳೀಯ ಸಂಘ ಸಂಸ್ಥೆಗಳೊಂದಿಗೆ ಸೇರಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತಿರುವುದು ದೆಹಲಿ ಕನ್ನಡಿಗರಿಗೆ ಹೆಮ್ಮೆಯ ವಿಷಯ. ಈ ನಿಟ್ಟಿನಲ್ಲಿ 'ಜನಕಪುರಿ ಕನ್ನಡ ಕೂಟ'ದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಜುಲೈ–2 ರಂದು ಸಡಗರ ಸಂತಸದಿಂದ ಆಚರಿಸಲಾಯಿತು.

ನವದೆಹಲಿ ಜಿಲ್ಲೆಯ ವಿಶೇಷ ಕರ್ತವ್ಯಾಧಿಕಾರಿ (ಕೊರೊನಾ ಲಸಿಕಾ) ಆಗಿರುವ ಶ್ರೀ ವೈಶಾಖ್ ನಾಗ್ (AFHQCS-ಸಶಸ್ತ್ರ ಪಡೆಗಳ ಪ್ರಧಾನ ಕಛೇರಿ–ನಾಗರಿಕ ಸೇವೆಗಳು) ಅವರು ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಕೊರೊನಾ ಮಹಾಮಾರಿಯು ತಂದೊಡ್ಡಿದ್ದ ಸಂಕಷ್ಟದ ಸಂದರ್ಭದಲ್ಲಿ ಎದುರಾದ ಹಲವು ಸಂಕಟಗಳು ಮತ್ತು ತಮಗಾದ ಅನುಭವಗಳನ್ನು ಹಂಚಿಕೊಂಡರು. 'ಕೊರೊನಾ' ಕಾಲಘಟ್ಟದಲ್ಲಿ ದೆಹಲಿಯ ಜನರೂ ಸೇರಿದಂತೆ ಅದರಲ್ಲೂ ಇಲ್ಲಿನ ಕನ್ನಡಿಗರ ಸೇವೆ ಮಾಡಲು ಸಿಕ್ಕ ಅವಕಾಶವನ್ನು ಮೆಲುಕು ಹಾಕಿದರು. ಆ ಕಷ್ಟ ಕಾಲದಲ್ಲಿ ಆಸ್ಪತ್ರೆಗಳಲ್ಲಿನ ಹಾಸಿಗೆ, ಆಕ್ಸಿಜನ್ ಮತ್ತು ಅಗತ್ಯ ಜೀವರಕ್ಷಕಗಳ ಕೊರತೆ ಉಂಟಾದ ಪರಿಸ್ಥಿತಿ, ಆ ಸವಾಲುಗಳು ಹಾಗೂ ಅವುಗಳನ್ನು ಎದುರಿಸಿ ಯಶಸ್ವಿಯಾದ ಪರಿಯನ್ನೂ, ಕೊರೋನ ಲಸಿಕಾ ಅಭಿಯಾನದ ವಿವರಗಳನ್ನು ಮನದಟ್ಟಾಗುವ ಹಾಗೆ ಅವರು ತಿಳಿಸಿದರಲ್ಲದೆ ಈ ಸಂಬಂಧವಾಗಿ ಅನೇಕ ಪೂರಕ ಮಾಹಿತಿ ನೀಡಿದರು. ತಾವು ಭಾರತೀಯ ಆಡಳಿತ ಸೇವಾ ಪರೀಕ್ಷೆ, ಸಂದರ್ಶನದ ಸಮಯದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ತಂಗಿದ್ದ ದಿನಗಳನ್ನು ನೆನಪಿಸಿಕೊಂಡರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ ಅವರು ಮಾತನಾಡಿ, ಸಂಘದ ಅಮೃತ ಮಹೋತ್ಸವ ಆಚರಣೆಯ ಈ ಹೊತ್ತಿನಲ್ಲಿ ಸಂಘದ ಸಹಕಾರದೊಂದಿಗೆ ಈ ಕಾರ್ಯಕ್ರಮ ನಡೆಯುತ್ತಿದ್ದು ಮುಂಬರುವ ದಿನಗಳಲ್ಲಿ ಕಾರ್ಯಕ್ರಮ ಆಯೋಜಿಸಲು ಆಸಕ್ತಿ ವ್ಯಕ್ತಪಡಿಸಿ ಕೋರುವ ದೆಹಲಿ ಹಾಗೂ ರಾಷ್ಟ್ರ ರಾಜಧಾನಿ ಕ್ಷೇತ್ರದ ಕನ್ನಡ ಸಂಘ–ಸಂಸ್ಥೆಗಳಿಗೆ ನಮ್ಮ ಸಂಘ ಸಹಕಾರದ ಮುಕ್ತ ಅವಕಾಶ ಕಲ್ಪಿಸಿದೆ. ಕನ್ನಡ ಸಂಸ್ಕೃತಿಯ ಹಿರಿಮೆ ಗರಿಮೆಯ ಕನ್ನಡ ಕಾರ್ಯಕ್ರಮಗಳಿಗೆ ದೆಹಲಿ ಕನ್ನಡ ಮನಸ್ಸುಗಳು ಆಗಮಿಸಿ ಕನ್ನಡತನ ಮೆರೆಯಬೇಕು ಎಂದರು. ದೆಹಲಿಯ ಸಂಘ–ಸಂಸ್ಥೆಗಳ ಮೂಲಕ ಆಯೋಜಿಸುವ ಎಲ್ಲಾ ಕಾರ್ಯಕ್ರಮಗಳಿಗೆ ಬೇರೆ–ಬೇರೆ ಸಂಘ ಪ್ರತಿನಿಧಿಸುವ ಕನ್ನಡಿಗರೂ ಆಗಮಿಸಬೇಕು ಎಂದು ಮನವಿ ಮಾಡಿದರು. ಕೊರೋನ ಕರಿ ಛಾಯೆಯ ವೇಳೆಯಲ್ಲಿ ಜನರು ಅದರಲ್ಲೂ, ದೆಹಲಿ ಕನ್ನಡಿಗರು ಅನುಭವಿಸಿದ ಯಾತನೆ, ಆ ಸಂಕಷ್ಟದಲ್ಲಿ ಕನ್ನಡಿಗರ ನೆರವಿಗೆ ಧಾವಿಸಿ, ತುರ್ತು ಅವಶ್ಯಕತೆಗೆ ತಾವು ಸ್ಪಂದಿಸಿ, ಆರೈಕೆ, ಔಷಧೋಪಚಾರಗಳೂ ಸೇರಿದಂತೆ, ಸೇವಾ ಮನೋಭಾವನೆಯಿಂದ ತೊಡಗಿಸಿಕೊಂಡು, ಸಾರ್ಥಕ ಸೇವೆ ನೀಡಿದ ಎಲ್ಲಾ 'ಕೊರೊನಾ ವಾರಿಯರ್ಸ್'ರವರ ಕಾರ್ಯ ಶ್ಲಾಘಿಸಿದರು. ದೆಹಲಿ ಕನ್ನಡಿಗರಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಮತ್ತು ಆಕ್ಸಿಜನ್ ಒದಗಿಸುವಲ್ಲಿ ಶ್ರೀ ವೈಶಾಖ್ ನಾಗ್ ಅವರು ಮಾಡಿದ ಸಹಾಯ, ನೀಡಿದ ಸಹಕಾರ ಅನನ್ಯ ಎಂದು ಬಣ್ಣಿಸಿದರು. ಈ ಸಂದರ್ಭ ಕೊರೊನಾ ಸೋಂಕಿಗೆ ಒಳಗಾಗಿ ಅಗಲಿದ ಕನ್ನಡಿಗರನ್ನು ಅವರು ಸ್ಮರಿಸಿಕೊಂಡರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣು ಕುಮಾರ್ ಮಾತನಾಡಿ, ಜನಕಪುರಿ ಕನ್ನಡ ಕೂಟದ ಚಟುವಟಿಕೆಗಳು, ಕಾರ್ಯ ವೈಖರಿ ಹಾಗೂ ದೆಹಲಿ ಕರ್ನಾಟಕ ಸಂಘದ ಪರಸ್ಪರ ಸಹಕಾರಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.




ನವದೆಹಲಿಯ ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಎನ್.



ಫೋಟೋ ರತ್ನ ಜಕ್ಕಿ ಬುರಕ್ಕೈತ್ತರು









ಉಚಿತ ರಕ್ತ ಪರೀಕ್ಷೆ





ಆರ್. ಶ್ರೀನಾಥ್ ಅವರು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಜನಕಪುರಿ ಕನ್ನಡ ಕೂಟ ಕಳೆದ 46 ವರ್ಷಗಳಿಂದಲೂ ಅವಿರತವಾಗಿ ದೆಹಲಿಯಲ್ಲಿ ಕನ್ನಡ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತ್ತಿದೆ. ಜನಕಪುರಿ ಕನ್ನಡ ಕೂಟವು ಪ್ರತಿ ವರ್ಷವೂ ಓರ್ವ ಸಾಧಕರನ್ನು ಗುರುತಿಸಿ, 'ಕೂಟ ರತ್ನ' ಪ್ರಶಸ್ತಿ ಕೊಡಮಾಡುತ್ತಾ ಬರುತ್ತಿದೆ. ಕೊರೊನಾದಿಂದ ಸತತ ಎರಡು ವರ್ಷಗಳವರೆಗೆ ಕಾರ್ಯಕ್ರಮ ನಡೆಯದೇ ಇದ್ದುದರಿಂದ ನೀಡಲಾಗಲಿಲ್ಲ. ಈ ಬಾರಿ ಮೂರು ಜನ ಸಾಧಕರಿಗೆ ಅವರು ಕನ್ನಡಕ್ಕೆ, ಕನ್ನಡಿಗರಿಗೆ ಹಾಗೂ ಜನಕಪುರಿ ಕನ್ನಡ ಕೂಟದ ಶ್ರೇಯೋಭಿವೃದ್ಧಿಗಾಗಿ ಸಲ್ಲಿಸಿದ ನಿಸ್ವಾರ್ಥ ಸೇವೆ ಗುರುತಿಸಿ ಈ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದರು.

**ಕೊರೊನಾ ವಾರಿಯರ್ಸ್‌ಗಳಿಗೆ ಅಭಿನಂದನೆ:**

ಕೊರೊನಾ ಮಹಾಮಾರಿಯ ಸಂಕಷ್ಟ ಕಾಲದಲ್ಲಿ ಅವಿರತ ಹಾಗೂ ಅನುಪಮ ಸೇವೆ ಮಾಡಿದ ಎನ್. ಆರ್. ಶ್ರೀನಾಥ್, ಕು. ರಚನಾ, ಕು. ರೋಹಿತ್, ಶ್ರೀಹರಿ, ಹನುಮಂತಾಚಾರ್ಯ, ಯೋಗೀಶ್ ಕುಮಾರ್ ಸೇನಿ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ್ ಅವರನ್ನೊ ಒಳಗೊಂಡ 'ಕೊರೊನಾ ವಾರಿಯರ್ಸ' ಅವರನ್ನು ಸನ್ಮಾನಿಸಲಾಯಿತು. ಜನಕಪುರಿ ಕನ್ನಡ ಕೂಟದ ಸದಸ್ಯ ಸಂಜೀವ ದೇಶಪಾಂಡೆ ಅವರು ಕೊರೋನ ವಾರಿಯರ್ಸ್ ಅವರ ಸೇವೆಯನ್ನು ಕೊಂಡಾಡಿದರು. ನಿಸ್ವಾರ್ಥ ಸೇವೆ, ಕಷ್ಟಕಾಲದಲ್ಲಿದ್ದವರಿಗೆ ಮಿಡಿದ ರೀತಿ ಅದ್ಭುತ. ನಮ್ಮ ಕಣ್ಮುಂದಿನ ಮಕ್ಕಳಾದಂತ ರಚನಾ, ರೋಹಿತ್ ಅವರ ಸೇವಾ ಮನೋಭಾವ ಇಂದಿಗೂ ನೆನಪಿನಲ್ಲುಳಿಯುವಂತಾದ್ದು. ಹಿರಿಯರ ಸನ್ಮಾರ್ಗ ಅನುಸರಿಸಿ ಸಮಾಜ ಸೇವೆ ಮಾಡಿದರು. ಕೊರೋನದಿಂದ ಮಡಿದವರ ಅಂತಿಮ ಸಂಸ್ಕಾರದ ಸಮಯದಲ್ಲಿ ಧೈರ್ಯದಿಂದ ಶಾಸ್ತ್ರೋಕ್ತವಾಗಿ ಶವಸಂಸ್ಕಾರ ನೆರವೇರಿಸಿದ ಹನುಮಂತಾಚಾರ್ಯ ಅವರ ಸೇವೆಯನ್ನು ಸಹ ಸ್ಮರಿಸಿದರು.

ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷರಾದ ಮಾಲಿನಿ ಪ್ರಹ್ಲಾದ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯದರ್ಶಿ ನಯನಾ ಮಾನಕಪುರೆ ವೇದಿಕೆಯಲ್ಲಿದ್ದರು. ಜನಕಪುರಿ ಕನ್ನಡ ಕೂಟದ ಕಾರ್ಯದರ್ಶಿ ಶೇಷಗಿರಿ ನಾಯಕ್ ಅವರು ವಂದಿಸಿದರು. ವಿಶ್ವ ಪರಿಸರ ದಿನದ ಅಂಗವಾಗಿ ತುಳಸಿ ಗಿಡ ನೀಡುವ ಮೂಲಕ ಪರಿಸರ ಪ್ರೇಮಕ್ಕೆ ಪ್ರೋತ್ಸಾಹ ನೀಡಲಾಯಿತು. ಪ್ರೇರಣಾ ವೆಂಕಟೇಶ್ ರಾವ್, ಲಾವಣ್ಯ ಬಸವರಾಜ್, ಕೃಷ್ಣರಾಜ್ ಹಾಗೂ ಜನಕಪುರಿ ಕನ್ನಡ ಕೂಟದ ಸದಸ್ಯರೂ, ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಸದಸ್ಯರು ಸಕ್ರೀಯವಾಗಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.

**ಕೂಟ ರತ್ನ ಪ್ರಶಸ್ತಿ ಪ್ರದಾನ:**

ಜನಕಪುರಿ ಕನ್ನಡ ಕೂಟ ಕೊಡ ಮಾಡುವ ಕೂಟ ರತ್ನ ಪ್ರಶಸ್ತಿಯನ್ನು ಶ್ರೀಮತಿ ಉಮಾ ರಾವ್, ಡಾ. ಕಿರಣ್ ಡಂಬಲ್ಕರ್ ಹಾಗೂ ಬಿ.ಕೆ ಬಸವರಾಜ್ ಅವರಿಗೆ ಪ್ರದಾನ ಮಾಡಲಾಯಿತು. ಅವರುಗಳು ಜನಕಪುರಿ ಕನ್ನಡ ಕೂಟಕ್ಕೆ ಕೃತಜ್ಞತೆ ಅರ್ಪಿಸಿದರು.

**ಉಚಿತ ರಕ್ತ ಪರೀಕ್ಷೆ :**

ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜನಕಪುರಿ ಕನ್ನಡ ಕೂಟದ ಖಜಾಂಚಿಗಳಾದ ಎಂ.ವಿ. ವೆಂಕಟೇಶ್ ಅವರ ಪೂರ್ಣ ಸಹಕಾರದಿಂದ ನವದೆಹಲಿಯ ಮ್ಯಾಕ್ಸ್ ಲ್ಯಾಬ್ ಸಂಸ್ಥೆಯ ಮೂಲಕ ಉಚಿತ ರಕ್ತ ಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿತ್ತು. ಹಲವಾರು ಕನ್ನಡಿಗರು ಇದರ ಸದುಪಯೋಗ ಪಡೆದುಕೊಂಡರು.

**ಸಾಂಸ್ಕೃತಿಕ ಕಾರ್ಯಕ್ರಮ :**

ಜನಕಪುರಿ ಕನ್ನಡ ಕೂಟದ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಸೊಗಸಾಗಿ ಮೂಡಿ ಬಂದವು. ಭಾಗ್ಯದ ಬಳೆಗಾರ ಸಮೂಹ ಗೀತೆಯನ್ನು ಜನಕಪುರಿ ಮಹಿಳಾ ಮಂಡಳಿಯ ಸದಸ್ಯರಾದ ಮಾಲಿನಿ ಪ್ರಹ್ಲಾದ್, ನಯನಾ ಮಾನಕಪುರೆ, ಜಯಶ್ರೀ ಬಸವರಾಜ್, ಲಾವಣ್ಯ ಬಸವರಾಜ, ಸುನೀತಾ ನಾಯಕ್, ಶೀಲಾ ಆನಂದ್, ಹೇಮಾ ಚಂದ್ರಶೇಖರ್, ರೂಪಶ್ರೀ, ಪ್ರೇರಣಾ ವೆಂಕಟೇಶ್‌ರವರು ಹಾಡಿದರು. ಕು| ಅಧೋಕ್ಷಜ ವೆಂಕಟೇಶ್ ಮತ್ತು ಪ್ರಭಂಜನ್ ಗಿಟಾರ್ ವಾದನವನ್ನು ನುಡಿಸಿದರು. ಪುಟಾಣಿ ಅವನಿ ನೆಲ್ಲಿ ಯೋಗ ನೃತ್ಯ ಮಾಡಿದಳು. ಡಾ. ಅಶೋಕ್ ಎಂ.ಈಟಿ ರವರು ಚಲನಚಿತ್ರ ಗೀತೆ ಹಾಡಿದರೆ, ಸವಿತಾ ನೆಲ್ಲಿ ಹಾಗೂ ಅವನಿ ನೆಲ್ಲಿರವರು ಸುಂದರ ನೃತ್ಯ ಹಾಗು ವಾಸುಕಿ ದೇಶಪಾಂಡೆ ಭರತನಾಟ್ಯ ಪ್ರದರ್ಶನ ಮಾಡಿದರು. ಜಯಶ್ರೀ ಬಸವರಾಜ್ ಹಾಗೂ ಗಿರೀಶ್‌ರವರು ಜೊತೆಯಾಗಿ ಚಲನಚಿತ್ರ ಗೀತೆಯನ್ನು ಹಾಡಿ ರಂಜಿಸಿದರು. ಶೀಲಾ ಆನಂದ್‌ರವರು ಒಂದು ಸುಂದರವಾದ ಭಾವಗೀತೆಯನ್ನು ಹಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ಕುಮಾರಿ ಸುಧಿತಿ ಅಂಬಳೆ ಹಾಗೂ ನಹರ್ ಗುರುದತ್ (USA)ರವರು ಜೊತೆಯಾಗಿ ಶಾಸ್ತ್ರೀಯ ಗೀತೆಗಳನ್ನು ಹಾಡಿದರು ಜನಕಪುರಿ ಮಹಿಳಾ ಮಂಡಳಿ ಕಾರ್ಯದರ್ಶಿ ಶ್ರೀಮತಿ ನಯನಾ ಮಾನಕಪುರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರ್ವಹಿಸಿದರು.

***ಲಾವಣ್ಯ ಬಸವರಾಜ್***

# ‘ಅದ್ಭುತ ಯಶಸ್ಸು ಕಂಡ ದೆಹಲಿ ಕರ್ನಾಟಕ ಸಂಘದ ಕಲ್ಯಾಣ ಕರ್ನಾಟಕ ಜಿಲ್ಲಾ ಸಾಂಸ್ಕೃತಿಕ ಉತ್ಸವ’

## ಭಾರತ ದೇಶದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಹುಟ್ಟಿರುವುದಕ್ಕೆ ನಾನು ಭಾಗ್ಯಶಾಲಿ : ಕೇಂದ್ರ ಸಚಿವ ಭಗವಂತ ಖೂಬಾ




ದೆಹಲಿ ಕರ್ನಾಟಕ ಸಂಘವು ತನ್ನ 75ನೇ ವರ್ಷದ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಅಂಗವಾಗಿ ಜುಲೈ 24 ರಂದು ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ಕಲ್ಯಾಣ ಕರ್ನಾಟಕ ಜಿಲ್ಲಾ ಸಾಂಸ್ಕೃತಿಕ ಉತ್ಸವ ಅಭೂತಪೂರ್ವ ಯಶಸ್ಸು ಕಂಡಿತು.

ಈ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಗಳ ನಾಟಕ, ನೃತ್ಯ, ಸುಗಮ ಸಂಗೀತ, ಚಲನಚಿತ್ರ ಪ್ರದರ್ಶನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಬಹಳ ಸೊಗಸಾಗಿ ಮೂಡಿ ಬಂದವು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ಕೇಂದ್ರ ಸಂಪುಟದ ಹೊಸ ಮತ್ತು ನವೀಕರಿಸಬಹುದಾದ ಇಂಧನ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ರಾಜ್ಯ ಸಚಿವರಾದ ಶ್ರೀ ಭಗವಂತ ಖೂಬಾ ಅವರು ಮಾತನಾಡಿ ಭಾರತ ದೇಶದಲ್ಲಿ ಅದರಲ್ಲೂ ಕರ್ನಾಟಕ ನಾಡಿನಲ್ಲಿ ಹುಟ್ಟಿರುವುದಕ್ಕೆ ನಾನು ಭಾಗ್ಯಶಾಲಿಯಾಗಿದ್ದೇನೆ. ಕರ್ನಾಟಕ ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿದೆ. ನಮ್ಮ ಕನ್ನಡ ಭಾಷೆಗೆ ಬಹಳಷ್ಟು ಪ್ರಾಚೀನತೆಯಿದ್ದು ಇಂತಹ ನಮ್ಮ ಭಾಷೆ, ಸಂಸ್ಕೃತಿಯನ್ನು ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ದೆಹಲಿ ಕನ್ನಡಿಗರಿಗೆ ತಲುಪಿಸುತ್ತಿರುವ ದೆಹಲಿ ಕರ್ನಾಟಕ ಸಂಘವನ್ನು ಶ್ಲಾಘಿಸಿದರು. ಕನ್ನಡ ನೆಲದ ಸಾಂಸ್ಕೃತಿಕ ಶಕ್ತಿ ದೆಹಲಿಯಲ್ಲಿ ಪ್ರದರ್ಶನವಾಗುತ್ತಿದ್ದು, ನಾಡಿನ ಆಹಾರ, ಉಡುಗೆ ತೊಡುಗೆಗಳಲ್ಲಿ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಕಾಣಬಹುದು. ದೆಹಲಿಯಲ್ಲಿ ನಾವೆಲ್ಲರು ಆರೂವರೆ ಕೋಟಿ ಕನ್ನಡಿಗರ ಪ್ರತಿನಿಧಿಯಾಗಿ ಕನ್ನಡದ ಸೇವೆ ಮಾಡುತ್ತಿರುವುದಕ್ಕೆ ನಮಗೆ ಹೆಮ್ಮೆಯಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಕಲಬುರಗಿ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಉಮೇಶ್ ಜಾಧವ್ ಅವರು ಮಾತನಾಡಿ ಕಾರ್ಯಕ್ರಮವನ್ನು ಸಂಘಟಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ದೆಹಲಿ ಕರ್ನಾಟಕ ಸಂಘ ನಾಡಿನ ಜನರ ಮನದಲ್ಲಿ ಸದಾ ಉಳಿದುಕೊಂಡಿದ್ದು, ಸಂಘದ ಕಟ್ಟಡವು ಬಹಳ ಸುಂದರವಾಗಿ ನಿರ್ಮಾಣವಾಗಿದ್ದು ದೇಶದ ಹೆಮ್ಮೆಯ ಸಂಸತ್ ಭವನವು ದೇಶದ ಜನರ ಮನಸ್ಸಿನಲ್ಲಿ ಸದಾಕಾಲ ಉಳಿದಿರುವಂತೆ, ಕರ್ನಾಟಕ ಸಂಘದ ಕಟ್ಟಡವು ಕನ್ನಡಿಗರ ಮನಸ್ಸಿನಲ್ಲಿ ಉಳಿಯುವಂತೆ ಮಾಡಿದ್ದಾರೆಂದು ಸಂಘದ ಕಟ್ಟಡ ನಿರ್ಮಾಣಕ್ಕೆ ಶ್ರಮಿಸಿದ ಸಂಘದ ಹಿಂದಿನ ಅಧ್ಯಕ್ಷರುಗಳು, ಹಿರಿಯ ಸಂಘಟಕರು ಮತ್ತು ಪದಾಧಿಕಾರಿಗಳ ಸೇವೆಯನ್ನು ನೆನಪಿಸಿಕೊಂಡರು.

ಈ ಸಂದರ್ಭದಲ್ಲಿ ಸಂಘವು ದೆಹಲಿಯಲ್ಲಿ ನಿರಂತರವಾಗಿ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವು ದಕ್ಕಾಗಿ ಬೇಕಾಗುವ ಅನುಕೂಲಗಳನ್ನು ಮಾಡಿಕೊಡಲಾಗುವುದು ಎಂದು ಭರವಸೆ ನೀಡಿ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ



ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಳ್ಳಾರಿ ಕ್ಷೇತ್ರದ ಲೋಕಸಭಾ ಸದಸ್ಯರಾದ ಶ್ರೀ ದೇವೇಂದ್ರಪ್ಪನವರು ಮಾತನಾಡಿ 'ಉಸಿರು ನಿಲ್ಲುವ ಮುನ್ನ, ಹೆಸರು ನಿಲ್ಲುವ ಕೆಲಸ ಮಾಡಿ' ಎನ್ನುವಂತೆ ಕೇಂದ್ರ ಮಂತ್ರಿಗಳಾದ ಭಗವಂತ ಖೂಬಾ ಅವರು ಮಾಡಿದ್ದಾರೆ. ಕಲಬುರಗಿ ರಂಗಾಯಣದ ನಿರ್ದೇಶಕರಾದ ಪ್ರಭಾಕರ್ ಜೋಶಿ ಮತ್ತು ಆ ಭಾಗದ ಖ್ಯಾತ ಸಾಮಾಜಿಕ ಚಲನಚಿತ್ರ ನಿರ್ದೇಶಕರಾದ ಮಂಜು ಪಾಂಡವಪುರ ಅವರಂತಹ ಪ್ರತಿಭಾವಂತರು ದೆಹಲಿಗೆ ಬಂದು, ದೆಹಲಿ ಕನ್ನಡಿಗರಿಗೆ ನಾಟಕ ಮತ್ತು ಸಿನೆಮಾ ತೋರಿಸುತ್ತಿರುವುದು ಖುಷಿಯ ಸಂಗತಿ ಎಂದು ಹೇಳಿದರು. ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ಭವನಗಳು ದೆಹಲಿಗೆ ಬರುವ ಕನ್ನಡಿಗರಿಗೆ ಕನ್ನಡ ನೆಲದ ರಾಜಕೀಯ ನಾಯಕರಿಗೆ ಅನ್ನ, ನೀರು, ಸೂರು ಒದಗಿಸುತ್ತಿರುವುದಕ್ಕೆ ತಾವು ಆಭಾರಿ ಎಂದು ಹೇಳುತ್ತಾ ಹಿಂದಿನ ಹಿರಿಯರು ಕಟ್ಟಿ ಬೆಳೆಸಿಕೊಟ್ಟ ಕರ್ನಾಟಕ ಸಂಘವನ್ನು ಉಳಿಸಿ ಬೆಳೆಸಿ ಕೊಂಡು ಹೋಗಲು ಕರೆ ನೀಡಿದರು.

ಕರ್ನಾಟಕ ರಂಗಾಯಣ ಕಲಬುರಗಿ ಇದರ ನಿರ್ದೇಶಕರಾದ ಪ್ರಭಾಕರ್ ಜೋಶಿಯವರು ಮಾತನಾಡಿ, ಒಬ್ಬ ಕಲಾ ಸೇವಕನಾಗಿ ರಂಗಾಯಣದ ನಿರ್ದೇಶಕರಾಗಿ ತಾವು ಆಯ್ಕೆಗೊಂಡ ಸಂದರ್ಭದಲ್ಲಿ ಅದರ ಮಾಹಿತಿ ದೂರದರ್ಶನದಲ್ಲಿ ಮೂಡಿ ಬರುತ್ತಿರುವುದನ್ನು ನೋಡಿ ಡಾ. ಉಮೇಶ್ ಜಾಧವ್ ಅವರು ತಮಗೆ ಫೋನ್ ಮೂಲಕ ಕರೆ ಮಾಡಿ ಶ್ಲಾಘಿಸಿದ್ದು, ಅವರು ಹೊಂದಿರುವಂತಹ ಮೃದು ಸ್ವಭಾವದ ವ್ಯಕ್ತಿತ್ವವನ್ನು ತೋರುತ್ತದೆ. ಕಲ್ಬುರ್ಗಿಯಂತಹ ಜಿಲ್ಲೆಯಲ್ಲಿ ಮಾಡುತ್ತಿದ್ದಂತಹ ಕೆಲಸಗಳನ್ನು, ಕಲಾಸೇವೆಯನ್ನು ಪರಿಗಣಿಸಿ ದೆಹಲಿ ಕರ್ನಾಟಕ ಸಂಘಕ್ಕೆ ಆಹ್ವಾನ ಕೊಟ್ಟು ತಮ್ಮ ರಂಗಾಯಣ ತಂಡದವರಿಂದ ಸಭಾಂಗಣದಲ್ಲಿ 'ಸಿರಿ ಪುರಂದರ' ನಾಟಕ ಪ್ರದರ್ಶನ ಮಾಡಲು ಅವಕಾಶ ನೀಡಿದ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ಅವರ ಕಾರ್ಯವನ್ನು ಮತ್ತು ಕನ್ನಡದ ಸಾಂಸ್ಕೃತಿಕ ಕೆಲಸಗಳಿಗೆ ಅವರು ನೀಡುತ್ತಿರುವ ಸೇವೆಯನ್ನು ಅಭಿನಂದಿಸುತ್ತಾ ಕೃತಜ್ಞತೆಗಳನ್ನು ತಿಳಿಸಿದರು. ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಪ್ರದರ್ಶನಗೊಂಡ ಸಾಮಾಜಿಕ ಸಂದೇಶ ನೀಡುವ 13 ನೇ ಬೆಂಗಳೂರು ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ









ಆಯ್ಕೆಯಾಗಿ ಪ್ರದರ್ಶನಗೊಂಡ 'ಮಾತಂಗಿ ದೀವಟಿಗೆ' ಚಲನಚಿತ್ರದ ನಿರ್ದೇಶಕರಾದ ಮಂಜು ಪಾಂಡವಪುರ ಅವರು ಮಾತನಾಡಿ ದಕ್ಷಿಣಭಾರತದ ಜನರಿಗೆ ಉತ್ತರದ ದೆಹಲಿಯಲ್ಲಿ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸಿದರು. ಮನುಷ್ಯ ಸದಾ ಸಹಕಾರ ಜೀವಿಯಾಗಿರಬೇಕು ಮತ್ತು ಉದಾತ್ತ ಮನಸ್ಸನ್ನು ಹೊಂದಿರಬೇಕು ಎಂದು ಕಥೆಯ ನಿದರ್ಶನದ ಮೂಲಕ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ಅವರು ಮಾತನಾಡಿ ಸಂಘದ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಅಂಗವಾಗಿ ಆಯೋಜಿಸಿದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಬಂದು ಕಾರ್ಯಕ್ರಮಕ್ಕೆ ಸಹಕರಿಸಿದ್ದಕ್ಕೆ ಕೇಂದ್ರ ಮಂತ್ರಿಗಳಾದ ಶ್ರೀ ಭಗವಂತ ಖೂಬಾ, ಸಂಸದರಾದ ಡಾ. ಉಮೇಶ್ ಜಾದವ್ ಮತ್ತು ಶ್ರೀ ದೇವೇಂದ್ರಪ್ಪನವರಿಗೆ ಧನ್ಯವಾದಗಳನ್ನು ತಿಳಿಸಿದರು.

ದೆಹಲಿ ಕರ್ನಾಟಕ ಸಂಘವು ರಾಷ್ಟ್ರ ರಾಜಧಾನಿಯಲ್ಲಿ ಸರ್ಕಾರಕ್ಕಿಂತ ಮಿಗಿಲಾಗಿ ಕನ್ನಡದ ಕೆಲಸಗಳನ್ನು ಮಾಡುತ್ತಿದ್ದು, ಇದಕ್ಕೆ ಸರ್ಕಾರ ಮತ್ತು ರಾಜಕೀಯ ನಾಯಕರುಗಳ ಸಹಕಾರ ಬೇಕಾಗಿದೆ ಎಂದು ವಿನಂತಿಸಿಕೊಂಡರು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕರ್ನಾಟಕ ಸಂಘಕ್ಕೆ ಹೆಚ್ಚಿನ ಹಣಕಾಸು ನೆರವು ಸಿಗದಿರುವುದಕ್ಕೆ ಬೇಸರ ವ್ಯಕ್ತಪಡಿಸಿ, ಸಚಿವರಾದ ಭಗವಂತ್ ಖೂಬಾ, ಸಂಸದರಾದ ಉಮೇಶ್ ಜಾಧವ್ ಅವರು ಈ ಬಗ್ಗೆ ಗಮನಹರಿಸಬೇಕೆಂದು ವಿನಂತಿಸಿದರು. ಕಲ್ಯಾಣ ಕರ್ನಾಟಕ ಜಿಲ್ಲಾ ಸಾಂಸ್ಕೃತಿಕ ಉತ್ಸವಕ್ಕೆ ಹೆಚ್ಚಿನ ನೆರವು ನೀಡಿದ್ದಕ್ಕೆ ಡಾ ಉಮೇಶ್ ಜಾದವ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ ಕರ್ನಾಟಕದಿಂದ ದೆಹಲಿಗೆ ಉನ್ನತ ಶಿಕ್ಷಣ, ಸ್ಪರ್ಧಾತ್ಮಕ ಮತ್ತು ಐಎಎಸ್ ಪರೀಕ್ಷೆಗೆ ಓದಲು ಬರುವ ವಿದ್ಯಾರ್ಥಿಗಳಿಗೆ ವಸತಿ ನಿಲಯ ನಿರ್ಮಾಣ ಮತ್ತು ಬಡವರಿಗಾಗಿ, ಕರ್ನಾಟಕದ ವಿದ್ಯಾರ್ಥಿಗಳಿಗಾಗಿ ರಾಜ್ಯದಲ್ಲಿರುವ ಹಾಗೆ ದೆಹಲಿಯಲ್ಲಿಯೂ ಕೂಡ ಇಂದಿರಾ ಕ್ಯಾಂಟೀನ್ ಮಾದರಿಯ ಕ್ಯಾಂಟೀನ್ ವ್ಯವಸ್ಥೆ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಆಸ್ಟ್ರೇಲಿಯಾದಂತಹ ಹೊರ ದೇಶದ ಮೆಲ್ಬೋರ್ನ್‌ನಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಅಲ್ಲಿನ ಸರ್ಕಾರವು ಸಂಪೂರ್ಣ ಸಹಕಾರ ನೀಡುತ್ತಾ ಪ್ರೋತ್ಸಾಹಿಸುತ್ತಿದೆ. ಹೀಗಿರುವಲ್ಲಿ ನಮ್ಮ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಕನ್ನಡವನ್ನು ಬೆಳೆಸುವ, ಕನ್ನಡ ಭಾಷೆ, ಕಲೆ, ಸಂಸ್ಕೃತಿಯನ್ನು ಪಸರಿಸುವ ಕಾರ್ಯವನ್ನು ನಿರಂತರವಾಗಿ ಕರ್ನಾಟಕ ಸರ್ಕಾರದ ಸಂಸ್ಥೆಗಳಿಗೂ ಮೀರಿ ನಮ್ಮ ಸಂಘ ಮಾಡುತ್ತಿದೆ. ಇದಕ್ಕೆ ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಿರೀಕ್ಷಿತ ಮಟ್ಟದ ಧನ ಸಹಾಯ ಮತ್ತು ಸಂಪೂರ್ಣ ಸಹಕಾರ ಸಿಗಬೇಕಾಗಿದೆ ಎಂದು ತಿಳಿಸಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ತಮ್ಮ ಅಮೂಲ್ಯ ವೇಳೆಯನ್ನು ಸಂಘದ ಚಟುವಟಿಕೆಗಳಿಗೆ ನೀಡುತ್ತಿರುವುದನ್ನು ಅವರು ಈ ಸಂದರ್ಭದಲ್ಲಿ ಉಲ್ಲೇಖಿಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿಗಳನ್ನು ಪರಿಚಯಿಸಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಅವರು ಸಮಾಜದಲ್ಲಿ ರಾಜಕೀಯ ನಾಯಕರ ಬಗ್ಗೆ 'ಕಠೋರ ವ್ಯಕ್ತಿತ್ವದವರು' ಎನ್ನುವ ಭಾವನೆ ಇದೆ. ವಾಸ್ತವದಲ್ಲಿ ಇಲ್ಲಿ ಕುಳಿತಿರುವ ಎಲ್ಲ ಅತಿಥಿ ಮಹೋದಯ ನಾಯಕರುಗಳು ಮೃದು ಸ್ವಭಾವವನ್ನು ಹೊಂದಿದವರಾಗಿದ್ದಾರೆಂದು ತಿಳಿಸುತ್ತಾ ಅತಿಥಿಗಳನ್ನು ಸ್ವಾಗತಿಸಿದರು. ಜೊತೆಗೆ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ ಅವರು ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು. ಜಂಟಿ ಕಾರ್ಯದರ್ಶಿ ಬಿ. ನಾರಾಯಣ ಅವರು ವಂದನಾರ್ಪಣೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು.










ಭಾನುವಾರ ಬೆಳಿಗ್ಗೆ 10 ಗಂಟೆಗೆ ಆರಂಭಗೊಂಡು ಇಡೀ ದಿನ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಮ್ಮ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾರಾವ್ ನಿರೂಪಿಸಿದರು. ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶಿವಪ್ಪ ಎಂ., ಕೆ.ಎಸ್. ಮೂರ್ತಿ, ಪ್ರಭಾಕರ ಮಡ್ಡಿತೋಟ, ಶ್ರೀಮತಿ ಸವಿತಾ ನೆಲ್ಲಿ, ಸಂತೋಷ ಜೆ., ಶ್ರೀಮತಿ ಮಾಲಿನಿ ಪ್ರಹ್ಲಾದ್, ಚಂದ್ರಶೇಖರ ಎನ್.ಪಿ., ನವೀನ್ ಕುಮಾರ್ ವಿ., ಶ್ರೀಮತಿ ಅಶ್ವಿನಿ ಬಿ.ಎಸ್. ಮತ್ತು ಎ.ಟಿ. ಶ್ರೀನಿವಾಸ ಅವರೂ ಸೇರಿದಂತೆ ಪ್ರತಿಯೊಬ್ಬರೂ ಮುತುವರ್ಜಿ ವಹಿಸಿ ಶ್ರಮಿಸಿ ಕಾರ್ಯಕ್ರಮ ಯಶಸ್ವಿಯಾಗಲು ನೆರವಾದರು. ಅಪಾರ ಸಂಖ್ಯೆಯಲ್ಲಿ ಭಾಗಿಯಾಗಿದ್ದ ದೆಹಲಿ ಕನ್ನಡಿಗರು 'ಮಾತಂಗಿ ದೀವಟಿಗೆ' ಸಿನೆಮಾ ಮತ್ತು 'ಸಿರಿ ಪುರಂದರ' ನಾಟಕಗಳನ್ನು ವೀಕ್ಷಿಸಿದರಲ್ಲದೇ, ಕಲ್ಯಾಣ ಕರ್ನಾಟಕ ಜಿಲ್ಲೆಯ ಕಲಾವಿದರಿಂದ ಪ್ರದರ್ಶನಗೊಂಡ ಡಾ. ಶುಭಾಂಗಿ ನೇತೃತ್ವದ ಓಂಕಾರ ನೃತ್ಯ ಸಾಧನ ತಂಡದವರಿಂದ ಸಮೂಹ ನೃತ್ಯ, ಖ್ಯಾತ ನೃತ್ಯ ಕಲಾವಿದ ಬಿ. ಬಸವರಾಜ್ ರವರ ಕೂಚಿಪುಡಿ ನೃತ್ಯ ಹಾಗು ಪ್ರಸಿದ್ಧ ಗಾಯಕ ರಾಮಚಂದ್ರ ಹಡಪದ್ ರವರ ಸುಗಮ ಸಂಗೀತದ ಸವಿಯನ್ನು ಆನಂದಿಸಿದರು.

**ಅಭಿಮತ ವರದಿ**

# ‘ವಿಜ್ಞಾನ ಮತ್ತು ತಂತ್ರ ಜ್ಞಾನದಲ್ಲಿ ಮುಂದುವರೆದ ಎಲ್ಲ ದೇಶಗಳು ತಮ್ಮ ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ನೀಡಿ ಅದ್ಭುತವಾದ ಸಾಧನೆ ಮಾಡಿವೆ’

## ಖ್ಯಾತ ಸಾಹಿತಿ, ಚಿಂತಕ, ಡಾ. ಹೆಚ್.ಎಸ್. ಶಿವಪ್ರಕಾಶ್




ದೆಹಲಿ ಕರ್ನಾಟಕ ಸಂಘದಲ್ಲಿ **‘ವರ್ತಮಾನದಲ್ಲಿ ಕನ್ನಡದ ಸವಾಲುಗಳು’** ಕುರಿತ ವಿಚಾರ ಸಂಕಿರಣದಲ್ಲಿ ನಾಡಿನ ಖ್ಯಾತ ಸಾಹಿತಿಗಳಾದ **ಡಾ. ಎಲ್. ಹನುಮಂತಯ್ಯ** ಮತ್ತು **ಡಾ. ಹೆಚ್.ಎಸ್. ಶಿವಪ್ರಕಾಶ್**. ದೆಹಲಿ ಕರ್ನಾಟಕ ಸಂಘವು ತನ್ನ 75ನೇ ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ಐತಿಹಾಸಿಕ ಘಟ್ಟದಲ್ಲಿ ನಾಡಿನ ವಿವಿಧ ಜಿಲ್ಲೆಗಳ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಪ್ರತಿಬಿಂಬಿಸುತ್ತ ಕನ್ನಡ ಮನಸ್ಸುಗಳಿಗೆ ಕರ್ನಾಟಕದ ಕಲೆ, ನೃತ್ಯ ಸಂಗೀತಗಳ ಸುಧೆಯನ್ನು ಉಣಬಡಿಸುತ್ತಿದೆ. ಜೊತೆಗೆ ಕನ್ನಡ ಹಾಗೂ ಕರ್ನಾಟಕವು ವರ್ತಮಾನದಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಚರ್ಚಿಸಲು ಭಾನುವಾರ ದಿನಾಂಕ 31 ಜುಲೈ 2022 ರಂದು ಏರ್ಪಡಿಸಿದ್ದ ವಿಚಾರ ಸಂಕಿರಣ ಅತ್ಯಂತ ಯಶಸ್ವಿಯಾಗಿ ನೆರವೇರಿತು. ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಮುಖ್ಯ ಅತಿಥಿಗಳಾದ ರಾಜ್ಯ ಸಭಾ ಸದಸ್ಯರಾದ ಮಾನ್ಯ ಡಾ. ಎಲ್ ಹನುಮಂತಯ್ಯ ನವರು ಉದ್ಘಾಟಿಸಿದರು. ನಾಡಿನ ಖ್ಯಾತ ಸಾಹಿತಿ ಡಾ. ಹೆಚ್.ಎಸ್. ಶಿವಪ್ರಕಾಶ್ ವರ್ತಮಾನದಲ್ಲಿ ಕನ್ನಡದ ಸವಾಲುಗಳು ಎಂಬ ವಿಷಯ ಕುರಿತ ತಮ್ಮ ಅಂತರಂಗದ ಮಾತುಗಳನ್ನು ಹಂಚಿಕೊಂಡರು. ಕಾರ್ಯಕ್ರಮವನ್ನು ಫೇಸ್ ಬುಕ್ ನಲ್ಲಿಯೂ ನೇರ ಪ್ರಸಾರ ಮಾಡಲಾಗಿದ್ದರಿಂದ ಹೊರ ದೇಶದ ಹಾಗೂ ಹೊರನಾಡಿನಲ್ಲಿರುವ ಕನ್ನಡಿಗರು ಕೂಡ ವಿಚಾರ ಸಂಕಿರಣದ ಪ್ರಯೋಜನ ಪಡೆಯಲು ಸಾಧ್ಯವಾಯಿತು.

ರಾಜ್ಯ ಸಭಾ ಸಂಸದರೂ, ಬಂಡಾಯ ಸಾಹಿತ್ಯದಲ್ಲಿ ಆರಂಭದಿಂದಲೂ ಗುರ್ತಿಸಿಕೊಂಡಿರುವ ಕವಿ, ಚಿಂತಕ, ಡಾ. ಎಲ್. ಹನುಮಂತಯ್ಯ ಅವರು ವಿಚಾರ ಸಂಕಿರಣವನ್ನು ದೀಪ ಬೆಳಗುವುದರ ಮೂಲಕ ಉದ್ಘಾಟನೆ ಮಾಡಿ ವರ್ತಮಾನ ಕಾಲ ಘಟ್ಟದಲ್ಲಿ ಕನ್ನಡದ ನಿಜವಾದ ಸವಾಲುಗಳ ಕುರಿತು ಬೆಳಕು ಚೆಲ್ಲಿದರು.

ಕನ್ನಡಿಗರು ತಮ್ಮ ಜೀವನೋಪಾಯಕ್ಕಾಗಿ ತಮ್ಮ ತಾಯ್ನಾಡಿನಿಂದ ರಾಜ್ಯವೂ ಸೇರಿದಂತೆ ದೇಶದ ಬೇರೆಬೇರೆ ಭಾಗಗಳಿಗೆ ಇತ್ತೀಚೆಗೆ ವಲಸೆ ಹೋಗುತ್ತಿದ್ದಾರೆ. ಪ್ರಪಂಚದ ಎಲ್ಲಾ ದೇಶಗಳಲ್ಲಿ ಕನ್ನಡಿಗರಿದ್ದಾರೆ. ಈ ಹಿಂದೆ ಬಹುತೇಕ ವಲಸೆ ಹೋಗುವ ಪರಿಸ್ಥಿತಿ ಇರಲಿಲ್ಲ ಎನ್ನುವಷ್ಟು ಕಡಿಮೆಯಿತ್ತು. ಹೊರದೇಶದಲ್ಲಿನ ಕನ್ನಡಿಗರ ಮುಂದೆ ಹಲವಾರು ಸಮಸ್ಯೆ ಸವಾಲುಗಳಿವೆ. ಕನ್ನಡಿಗರು ತಾವಿರುವಲ್ಲಿ ಕನ್ನಡ ಸಂಘ ಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತಾರೆ. ಕನ್ನಡಿಗರೆಲ್ಲಾ ಒಂದೇ ಎಂದು ಹೇಳುತ್ತೇವಾದರೂ ಯಾವುದೊ ಒಂದು ಜಾತಿ, ಧರ್ಮ, ಪ್ರಸಿದ್ಧ ಪುರುಷರ ಹೆಸರುಗಳನ್ನು ಇತ್ತು ಕನ್ನಡ ಸಂಘ ಕಟ್ಟಿಕೊಂಡು ಕುಬ್ಜ ಮನಸ್ಸಿನವರಂತೆ ವರ್ತಿಸುವುದನ್ನು ಬಿಟ್ಟು ವಿಶಾಲ ಮನೋಭಾವದವರಾಗಬೇಕು. ಪ್ರಜಾಪ್ರಭುತ್ವದ ಕಲ್ಪನೆಯು ಇರದೇ ಇದ್ದ ಸಂದರ್ಭದಲ್ಲಿ ಬಸವಾದಿ ಪ್ರಥಮರು ಪ್ರಜಾಪ್ರಭುತ್ವದ ಕಲ್ಪನೆ ನೀಡಿ, ಎಲ್ಲರನ್ನೂ ಒಟ್ಟುಗೂಡಿಸಿದರು. ಕನ್ನಡಿಗರೂ ಒಟ್ಟುಗೂಡುವ ಮನಸ್ಸಿನವರಾದಾಗ ಮಾತ್ರ ಪ್ರಗತಿ ಕಾರ್ಯ ಸಾಧ್ಯ ಎಂದರು.

ಕನ್ನಡ ಭಾಷೆಯ ಸದ್ಯದ ಪರಿಸ್ಥಿತಿ ಕುರಿತು ಮಾತನಾಡಿದ ಸಾಹಿತಿಗಳು, ಕನ್ನಡವನ್ನು ಉಳಿಸಿಕೊಳ್ಳುವ ಪ್ರಮಾಣಿಕ ಪ್ರಯತ್ನ ಕನ್ನಡಿಗರು ಮಾಡಿದ್ದಾರೆ. ಕನ್ನಡ ಭಾಷಾಭಿಮಾನ ಅನ್ಯ ಭಾಷೆಯವರಿಗಿಂತ ಅಂತರ ಕಡಿಮೆಯಾಗಿದೆ ಎಂದು ಅನಿಸಲೂಬಹುದು. ಕನ್ನಡಿಗರಲ್ಲಿ ಭಾವನಾತ್ಮಕ ಸಂಬಂಧ ಅನ್ಯ ಭಾಷಿಕರಿಗಿಂತ ಕೊಂಚ ಕಡಿಮೆ ಎಂಬ ತಮ್ಮ ಘಾನಾ ದೇಶಕ್ಕೆ ಅಧ್ಯಯನ ಪ್ರವಾಸ ಸಂದರ್ಭದ ಪ್ರಸಂಗವನ್ನು ಉದಾಹರಿಸಿ ಹಂಚಿಕೊಂಡರು.

ಈ ಹಿಂದೆ ತಾವು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಧ್ಯಯನ ಪ್ರವಾಸ ತೆರಳಿದ ಸಂದರ್ಭದಲ್ಲಿ ಅಲ್ಲಿಯ ಕನ್ನಡಿಗರನ್ನು ಬಹಳ ಹತ್ತಿರದಿಂದ ಭೇಟಿ ಮಾಡಿದ್ದೆ, ಅಲ್ಲಿ ಅವರು ಎದುರಿಸುತ್ತಿರುವ ಕನ್ನಡದ ಸವಾಲುಗಳ ಬಗ್ಗೆ ಅವರೊಂದಿಗೆ ಮಾತನಾಡಿದಾಗ ಕಂಡುಕೊಂಡ ವಿಷಯ ಏನೆಂದರೆ, ಅವರು ಅಲ್ಲಿ ಕನ್ನಡಿಗರಾಗಿದ್ದೂ ಕನ್ನಡ ಬಾರದವರಿಗೆ ಹಾಗೂ ತಮ್ಮ ಮಕ್ಕಳಿಗೆ ‘ಕನ್ನಡ ಕಲಿಕಾ ತರಬೇತಿ ಕೇಂದ್ರ’ಗಳನ್ನು ಸ್ಥಾಪಿಸಿಕೊಂಡಿದ್ದಾರೆ. ತಮ್ಮ ಮಕ್ಕಳು ಕನ್ನಡ ಕಲಿಯುವುದರಿಂದ ತಾಯ್ನಾಡಿನ ಸಂಬಂಧ ವೃದ್ಧಿಯಾಗುವುದರೊಂದಿಗೆ ಇದು ಮುನ್ನಡೆಗೂ ಸಹಾಯಕಾರಿ ಆಗುತ್ತದೆ. ಕನ್ನಡದ ಜೊತೆಗಿನ ನಂಟನ್ನು ಕಳೆದುಕೊಳ್ಳುವುದೆಂದರೆ ಅದು ನಮ್ಮ ಸಂಸ್ಕೃತಿ, ನಮ್ಮ ಕುಟುಂಬ ನಮ್ಮ ಕನ್ನಡತನವನ್ನೇ ಕಳೆದುಕೊಂಡಂತೆ ಸರಿ ಎಂದರು. ಕನ್ನಡವನ್ನು ಮಾತನಾಡುವ ಸಂಸ್ಕೃತಿಯನ್ನು ಕಲಿಸುವ ಕೆಲಸವಾಗುತ್ತಿದೆ. ಕನ್ನಡ ನೆಲ ಭಾಷೆಯೊಂದಿಗೆ ನಿರಂತರ ಸಂಪರ್ಕದಲ್ಲಿರುವ ಕಾರಣ ಹೊರದೇಶಗಳಲ್ಲಿರುವ ಕನ್ನಡಿಗರ ಕಷ್ಟ ಕಾರ್ಪಣ್ಯಗಳಂತೆ ಹೊರನಾಡಿನ ಕನ್ನಡಿಗರಿಗೆ ಅಷ್ಟಾಗಿ ಇದು ತಟ್ಟುವುದಿಲ್ಲ ಎಂದು ವ್ಯಕ್ತಪಡಿಸಿದರು.

ಕನ್ನಡಕ್ಕಿರುವ ಸವಾಲುಗಳ ಬಗ್ಗೆ ಮಾತನಾಡುತ್ತಾ, ಕನ್ನಡಿಗರು ಯಾವ ನಾಡಿನಲ್ಲಿರುತ್ತಾರೋ ಆ ನಾಡಿನ ಭಾಷೆಯನ್ನು ವ್ಯವಹಾರಕ್ಕಾಗಿ ಕಲಿಯುವುದು ಅನಿವಾರ್ಯವಾಗುತ್ತದೆ. ದೇಶದ ಒಕ್ಕಟ್ಟು ಹಾಗೂ ಸಮಗ್ರತೆ ದೃಷ್ಟಿಯಿಂದ ಭಾಷಾ ಸೂತ್ರವಿದೆ. ಬೆಂಗಳೂರಿನಲ್ಲಿ ಕನ್ನಡ ಬೆಳೆಯಬೇಕು ಎಂದರು. ಲಕ್ಷಾಂತರ ಜನರಿಗೆ ಉದ್ಯೋಗ ಕೊಡುವ ಕ್ಷೇತ್ರ ಬ್ಯಾಂಕಿಂಗ್ ಕ್ಷೇತ್ರವಾಗಿದೆ. 1982 ರಲ್ಲಿ ಬೆಂಗಳೂರಿನಲ್ಲಿ ಎಸ್‌ಬಿಐನ ಸ್ಥಳೀಯ ಪ್ರಧಾನ ಕಚೇರಿ ಆರಂಭವಾಯಿತು. ಗ್ರಾಮೀಣ ಭಾಗದ ಶಾಲೆ ಕಾಲೇಜುಗಳಲ್ಲಿ ಕಂಪ್ಯೂಟರ್ ಕಲಿಸುವ ಪರಿಪಾಠವಿಲ್ಲ. ಗ್ರಾಮೀಣ ಭಾಗದ ಮಕ್ಕಳಿಗೆ ಆನ್‌ಲೈನ್ ಮೂಲಕ ಅರ್ಜಿ ಹಾಕುವುದು ಅಷ್ಟಾಗಿ ತಿಳಿದಿರುವುದಿಲ್ಲ. ಈ ಕಾರಣದಿಂದ ಅವರು ಉದ್ಯೋಗದಿಂದ ವಂಚಿತರಾಗಬಾರದು. ಕನ್ನಡವನ್ನು ಅನ್ನದ ಭಾಷೆಯನ್ನಾಗಿಸುವುದರಿಂದ ನಮ್ಮ ಗ್ರಾಮೀಣ ಭಾಗದ ಮಕ್ಕಳು ನಿರುದ್ಯೋಗಿಗಳಾಗುವುದನ್ನು ತಪ್ಪಿಸಬಹುದು. ಇದು ಈಗ ಕನ್ನಡ ಭಾಷೆಯ ಬಹುದೊಡ್ಡ ಸವಾಲು. ಕನ್ನಡ ಕಲಿತವರಿಗೆ ಕರ್ನಾಟಕದಲ್ಲಿ ಉದ್ಯೋಗ ಕೊಡುವ ಪರಿಸ್ಥಿತಿ ನಿರ್ಮಾಣ ಆಗಬೇಕಾಗಿದೆ. ಹೈಕೋರ್ಟ್‌ನಲ್ಲಿ ಸ್ಥಳೀಯ ಭಾಷೆಯಲ್ಲಿ ವ್ಯವಹಾರಕ್ಕೆ ಅವಕಾಶ ಕಲ್ಪಿಸಬೇಕು. ಶಿಕ್ಷಣದಲ್ಲಿ ಮಾತ್ರ ಭಾಷೆಯ ಮಾಧ್ಯಮ ಇರಬೇಕು. ಎಲ್ಲ ಭಾಷಿಕರೂ ಇಂಗ್ಲೀಷ್ ವ್ಯಾಮೋಹಕ್ಕೆ ಒಳಗಾಗಿದ್ದಾರೆ. ವಿಜ್ಞಾನದಲ್ಲಿ ಮುಂದುವರಿದ ದೇಶಗಳು ಮಾತೃ ಭಾಷೆಯಲ್ಲಿಯೇ ತಮ್ಮ ಮಕ್ಕಳಿಗೆ ಶಿಕ್ಷಣ ಕಲಿಸುತ್ತಿದ್ದಾರೆ. ಇಂಗ್ಲೀಷ್ ಒಂದು ಭಾಷೆಯನ್ನಾಗಿ ಕಲಿಸಬಹುದಾಗಿದೆ. ಮಾತೃಭಾಷೆಯಲ್ಲಿಯೇ ಕಲಿತ ಬಹುದೊಡ್ಡ ಸಾಧಕರಿದ್ದಾರೆ, ವಿಜ್ಞಾನಿ ಪ್ರೊ. ಸಿಎನ್‌ಆರ್ ರಾವ್ ಅವರು ಕನ್ನಡ ಶಾಲೆಯಲ್ಲಿ ಓದಿದವರು. ಇಂಗ್ಲೀಷ್ ಮತ್ತು ಕನ್ನಡ ಕಲಿಯುವವರ ಮಧ್ಯದ ಅಂತರ ಹೆಚ್ಚಾಗಿದೆ.

ಕನ್ನಡವನ್ನು ಒಂದು ಭಾಷೆಯಾಗಿ ಕಲಿಯುವ

ಮತ್ತು ಉಳಿಸುವ ಬಹುದೊಡ್ಡ ಸವಾಲು ಇವತ್ತು ನಮ್ಮ ಮುಂದೆ ಇದೆ. ಶಾಶ್ವತವಾಗಿ ಭಾಷೆಗೆ ಸ್ವಾಯತ್ತತೆ ನೀಡಬೇಕಾಗಿದೆ. ಆಗ ಪ್ರತ್ಯೇಕ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಲು ಸಾಧ್ಯ. ಅಗ ಅನುದಾನ ದೊರೆಯುವುದು. ಇದು ಬಹಳ ಅಗತ್ಯ ಕನ್ನಡದ ಜೊತೆಗೆ ಕನ್ನಡದ ಸಹಭಾಷೆಗಳಾದ ಕೊಡವ, ಕೊಂಕಣಿ, ತುಳು ಮುಂತಾದ ಹಲವಾರು ಭಾಷೆಗಳ ಬೆಳವಣಿಗೆಯಾಗಬೇಕು ಮುಂತಾದ ಕನ್ನಡ ದೃಷ್ಟಿಯಿಂದ ಕೋಟ್ಯಂತರ ಜನರಿಗೆ ಕನ್ನಡ ನಮ್ಮ ಮುಂದಿನ ಭವಿಷ್ಯ ರೂಪಿಸುತ್ತದೆ ಎಂಬ ಭರವಸೆ ಮೂಡಿಸಬೇಕಾಗಿದೆ ಎಂದರು.

ವಿಚಾರ ಸಂಕಿರಣದಲ್ಲಿ 'ವರ್ತಮಾನದಲ್ಲಿ ಕನ್ನಡದ ಸವಾಲುಗಳು' ವಿಷಯ ಕುರಿತು ವಿಚಾರಮಂಡನೆ ಮಾಡಿದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕನ್ನಡಕ್ಕೆ ಶಕ್ತಿ ತುಂಬಿದಂತ ಓರ್ವ ಸಮಕಾಲಿನ ಚಿಂತಕ ಡಾ. ಎಚ್.ಎಸ್. ಶಿವಪ್ರಕಾಶ್ ಅವರು ತಾವು ಓದಿದ ಬೆಂಗಳೂರಿನ ಕನ್ನಡ ಮಾಧ್ಯಮದ ಶಾಲೆಯಿಂದ ಹಿಡಿದು, ಇಡೀ ಜಗತ್ತಿನಾದ್ಯಂತ ಅಟ್ಲಾಂಟಿಕ್ ಫೆಸಿಫಿಕ್ ಮಹಾ ಸಾಗರದವರೆಗಿನ ಮತ್ತು ಅಮೇರಿಕ, ಇಂಗ್ಲೆಂಡ್‌ಗಳೂ ಸೇರಿದಂತೆ ಎಲ್ಲ ದೇಶಗಳೂ ಆಯಾ ಸ್ಥಳೀಯ ಭಾಷೆಗಳಿಗೆ ಹೆಚ್ಚು ಆದ್ಯತೆ ಕೊಟ್ಟಿವೆ. ಇಂದು ಜಗತ್ತಿನಲ್ಲಿ ವಿಜ್ಞಾನ ಮತ್ತು ತಂತ್ರ ಜ್ಞಾನದಲ್ಲಿ ಮುಂದುವರೆದ ದೇಶಗಳು ಆಯಾ ದೇಶಗಳ ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ನೀಡಿ ಅದ್ಭುತವಾದ ಸಾಧನೆ ಮಾಡಿವೆ. ಹಾಗಾಗಿ ಕನ್ನಡದಲ್ಲಿ ಶಿಕ್ಷಣ ಪಡೆದವರು ಹಿಂಜರಿಯಬೇಕಿಲ್ಲ. ಸ್ವತಃ ತಾವು ಕೂಡ ಕನ್ನಡ ಮಾಧ್ಯಮದಲ್ಲಿಯೇ ಓದಿ ಇಂಗ್ಲೀಷ್ ಪ್ರಾಧ್ಯಾಪಕ, ಕವಿ ಹಾಗೂ ಭಾಷಾಂತರಕಾರನಾಗಿದ್ದೇನೆ ಎಂದು ಮಾತೃ ಭಾಷೆ ಕನ್ನಡ ಮಾಧ್ಯಮದ ಅಗತ್ಯತೆ ಕುರಿತು ಬಹು ವಿಸ್ತೃತವಾಗಿ ಮಾತನಾಡಿದರು. ಆರಂಭಿಕ ಶಿಕ್ಷಣದ ಹಂತದಿಂದಲೂ ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಯಬೇಕು ಆದರೆ ಕನ್ನಡ ಶಿಕ್ಷಣದ ಮಾಧ್ಯಮ ಆಗಬೇಕು ಎಂದು ಹಲವು ವಿಚಾರಗಳನ್ನು ಹಂಚಿಕೊಂಡರು.

ಜಾಗತೀಕರಣದ ಪ್ರಭಾವದಿಂದಾಗಿ ಇಂಗ್ಲೀಷ್ ಮೋಹಕ್ಕೆ ಒಳಗಾಗಿದ್ದೇವೆ. ಇಂಗ್ಲೀಷ್ ಬೆಳೆಯಲು ಅದರ ಅಂಧಾನುಕರಣೆ ಕಾರಣವಾಗಿದ್ದು ಅದರಿಂದ ತಪ್ಪಿಸಿಕೊಳ್ಳಬೇಕಾಗಿದೆ. ಬಾಲಿವುಡ್ ಸಿನಿಮಾಗಳಲ್ಲಿ ಇಂಗ್ಲೀಷ್ ಬಳಕೆ ಯಥೇಚ್ಛವಾಗಿದೆ. ಕರ್ನಾಟಕ ಪ್ರದೇಶಗಳಲ್ಲಿ ಇಂಜಿನೀಯರಿಂಗ್ ಮತ್ತು ವೈದ್ಯಕೀಯ ವಿಜ್ಞಾನವನ್ನು ಉರ್ದುವಿನಲ್ಲಿ ಕಲಿಸಲಾಗುತ್ತಿತ್ತು. ನಮ್ಮ ಕನ್ನಡ ಸಂಸ್ಕೃತಿ ಅಗಾಧವಾದದ್ದು, ಇದರ ಅನರ್ಘ್ಯ ನಿಧಿಗಳಾಗಿರುವ ಮೌಖಿಕ ಪರಂಪರೆ, ಜಾನಪದ, ಯಕ್ಷಗಾನ, ಉತ್ತರ ಕರ್ನಾಟಕದ ಬಯಲಾಟ ಪ್ರಕಾರಗಳಲ್ಲಿ ಒಂದಾದ ಶ್ರೀ ಕೃಷ್ಣ ಪಾರಿಜಾತವೂ ಒಳಗೊಂಡಂತೆ ಎಲ್ಲ ಕಲೆಗಳನ್ನು ಪೋಷಿಸಿ ಆ ಮೂಲಕ ಕನ್ನಡದ ಚಿಂತನೆಯ ವೈವಿಧ್ಯತೆ ಮತ್ತು ಲೋಕದೃಷ್ಟಿ ಬೆಳೆಸುವುದು ಅಗತ್ಯ. ಹಂಪಿಯ ಕನ್ನಡದ ವಿಶ್ವವಿದ್ಯಾಲಯ ಕನ್ನಡದ ಚಿಂತನಾ ಕ್ರಮಗಳನ್ನೂ ಬೆಳೆಸುವ ಸದುದ್ಧೇಶ ಹೊಂದಿದ್ದು ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯದ ಪ್ರಕಟಣೆಗಳು ಸೇರಿದಂತೆ ಹಲವು ಕಾರ್ಯಗಳಾಗಿವೆ. ಕನ್ನಡದ ವಚನಕಾರರದ್ದೇ ಒಂದು ಚಿಂತನಾಕ್ರಮವಿದೆ. ಕನ್ನಡದ ಅನುಭಾವಿಗಳದ್ದೇ ಒಂದು ಚಿಂತನಾ ಕ್ರಮವಿದೆ. ಕನ್ನಡದ ಈ ಎಲ್ಲ ಮೂಲ ಚಿಂತನ ಕ್ರಮಗಳನ್ನೂ ಆಧುನಿಕ ಜಗತ್ತಿಗೆ ಪರಿಚಯಿಸಬೇಕಾದ ಅಗತ್ಯತೆ ಇದೆ. ಭಾಷೆಯ ಜೊತೆಗೆ ಅಡಕವಾಗಿರುವ ಜಾನಪದ ಸಾಹಿತ್ಯದಲ್ಲಿ ಜ್ಞಾನ ಭಂಡಾರವಿದೆ. ನಮ್ಮ ಜಾನಪದ ಜಗತ್ತಿನಲ್ಲಿರುವ ಜ್ಞಾನ ಬಹುಮಟ್ಟಿಗೆ ಮೌಖಿಕ ಪರಂಪರೆಯಲ್ಲಿದ್ದು, ಅನೇಕ ಉಪಯೋಗಿ ಅಂಶಗಳಿವೆ, ಅವು ಕೇವಲ ಗತವೈಭವಗಳ ಕುರುಹುಗಳಲ್ಲ. ಇವು ಎಲ್ಲ ಕಾಲಕ್ಕೂ ಅತ್ಯಗತ್ಯವಾಗಿ ಬೇಕಿರುವ ಜೀವಂತ ಸೆಲೆಗಳು. ಆದ್ದರಿಂದ ದೇಶೀ ಭಾಷೆಯನ್ನು ಬಳಕೆಗೆ ತರುವುದರ ಮೂಲಕ ದೇಶೀಯ ಚಿಂತನೆಯನ್ನು, ವಿಶ್ಲೇಷಣ ವಿಧಾನವನ್ನು ವ್ಯಾಪಕಗೊಳಿಸಬೇಕಿದೆ.

ಕೊರೊನಾ ಕಾಲಘಟ್ಟದಲ್ಲಿ ಆನ್‌ಲೈನ್ ಮೂಲಕ ಸಂವಹನ ಯಥೇಚ್ಚವಾಗಿ ನಡೆದು ಸಂಪರ್ಕ ಸಾಧನ ಬಹಳಷ್ಟು ಸರಳೀಕರಣಗೊಂಡಿದ್ದರಿಂದ ಹೆಚ್ಚು ಉಪಯೋಗವಾಯಿತು ಎಂದ ಅವರು ಆನ್‌ಲೈನ್ ಮೂಲಕ ಸಭೆ ಸಮಾರಂಭಗಳಿಗೆ ಒಂದು ಹೊಸ ಉತ್ತೇಜನ ದೊರೆಯಲು ನಾಂದಿಯಾಯಿತು.ಇದರಿಂದ ಹೊರ ದೇಶದಲ್ಲಿ ಯಥೇಚ್ಛವಾದ ಕನ್ನಡಪರ ಚಟುವಟಿಕೆಗಳು ನಡೆಯುತ್ತಿವೆ ಎಂದರು. ಕನ್ನಡ ಶಾಸ್ತ್ರೀಯ ಭಾಷಾ ಸ್ಥಾನ ಮಾನದ ಕುರಿತು ಮಾತನಾಡಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಮುಖ್ಯವಾಗಿ ದೆಹಲಿ, ಬನಾರಸ್ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಪೀಠಗಳು ಹಿಂದಿನಿಂದಲೂ ಇದ್ದು ಅವುಗಳನ್ನು ಸಕ್ರಿಯಗೊಳಿಸುವುದರ ಜೊತೆಗೆ, ಹೊರ ದೇಶದಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಅಧ್ಯಯನ ಪೀಠಗಳನ್ನು ಸ್ಥಾಪನೆ ಮಾಡುವ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ ಎಂದು ಆ ಮೂಲಕ ಕನ್ನಡ ಭಾಷೆ ಹಾಗೂ ಕನ್ನಡ ಸಂಸ್ಕೃತಿಯನ್ನು ಕಾಪಾಡಿಕೊಂಡು ನಮ್ಮ ಭಾಷೆ, ಸಂಸ್ಕೃತಿಯು ನಶಿಸುವುದನ್ನು ತಡೆಯಬೇಕಾಗಿದೆ ಎಂದು ವಿಚಾರ ವ್ಯಕ್ತ ಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ಅವರು ಮಾತನಾಡಿ, ಸಂಘವು ತನ್ನ ಪರಿಮಿತಿಯ ಅನುದಾನದಡಿ ಕನ್ನಡ ಕಾರ್ಯಕ್ರಮಗಳನ್ನು ನಿಯಮಿತವಾಗಿ ಹಾಗೂ ನಿರಂತರವಾಗಿ ಕನ್ನಡಿಗರನ್ನು ತೊಡಗಿಸಿಕೊಂಡು ಮುನ್ನಡೆಯುತ್ತಿದೆ. ದೆಹಲಿ ಕನ್ನಡಿಗರ ಕಳಶಪ್ರಾಯವಾಗಿ ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಾಲೆ ಇವೆ. ನಮ್ಮ ಹಿರಿಯರು ಇವುಗಳನ್ನು ಪೋಷಿಸಿದ್ದಾರೆ. ಅವರು ಕಂಡ ಕನಸು ಇವು ಬೆಳೆದು ಹೆಮ್ಮರವಾಗಿ ಕನ್ನಡದ ಉಸಿರು ನೀಡಬೇಕೆಂಬುದು. ಅವರ ಒತ್ತಾಸೆಗೆ ಪೂರಕವಾಗಿ ಹಲವು ಯೋಜನೆಗಳನ್ನು ರೂಪಿಸಿ, ದೆಹಲಿ ಕನ್ನಡಿಗರನ್ನು ತಲುಪುವ ಹಾಗೂ ಅವರನ್ನು ತೊಡಗಿಸಿಕೊಳ್ಳುವ ಮಹತ್ಕಾರ್ಯವನ್ನು ಸಂಘ ಮಾಡುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ ಇನ್ನಷ್ಟು ಸಹಾಯ ಸಹಕಾರ ನೀಡಬೇಕೆಂದು ಮನವಿ ಮಾಡಿಕೊಂಡರು. ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಈ ಸುಸಂದರ್ಭದಲ್ಲಿ ಸಂಘವು ತನ್ನ 75ನೇ ವರ್ಷದ ಅಮೃತ ಮಹೋತ್ಸವದ ಕ್ಷಣಗಳಿಗೆ ಸಾಕ್ಷಿಯಾಗುತ್ತಿದೆ. ಈ ಅವಧಿಯಲ್ಲಿ ನನ್ನ ಕಾರ್ಯಾಧ್ಯಕ್ಷತೆಯಲ್ಲಿ ನೆನಪಿನಲ್ಲುಳಿಯುವಂತಹ ಕನ್ನಡಿಗರ ಮನ-ಮನೆ ಮುಟ್ಟುವ ಕಾರ್ಯ ಯೋಜನೆಯನ್ನು ಹೊರನಾಡ ಕನ್ನಡಿಗರ ಆಶೋತ್ತರಗಳಿಗೆ ಪೂರಕವಾಗಿ ಕಾರ್ಯಯೋಜನೆ ರೂಪು ತಾಳಲಿದೆ. ಇದಕ್ಕೆ ತಮ್ಮೆಲ್ಲರ ಸಹಾಯ ಸಹಕಾರ ಬೇಕೆಂದು ಅವರು ಈ ಸಂದರ್ಭ ಹೇಳಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದು ಪ್ರತಿಕ್ರಿಯೆ ವ್ಯಕ್ತ ಪಡಿಸಿದ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಪ್ರೊ. ವಿಶ್ವನಾಥ ಅವರು ನಮ್ಮ ದೇಶ ಭಾಷೆ ವಚನಕಾರರು ಮತ್ತು ಕೀರ್ತನಕಾರರು ದೇಸೀಯ ಭಾಷೆಯಲ್ಲಿ ಅವರು ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಅದನ್ನು ಜಗತ್ತಿಗೂ ಹಂಚಿದ್ದಾರೆ. 'ಅಕ್ಕಿಯನು ಉಂಬುವನು ಹಕ್ಕಿಯಂತಾಗುವನು' ಎಂಬ ಸರ್ವಜ್ಞ ಕವಿಯ ಸಾಲುಗಳನ್ನು ಸೂಕ್ತವಾಗಿ ಬಳಸಿಕೊಂಡರು. ವಚನಕಾರರ ಸಾರ ಹಾಗೂ ಸಾಲಿನ ಮಹತ್ವ ಈ ಸಂದರ್ಭದಲ್ಲಿ ಉಲ್ಲೇಖಿಸಿದರು. ಕನ್ನಡವನ್ನು ಅನ್ನದ ಭಾಷೆ ಹಾಗೂ ಚಿನ್ನದ ಭಾಷೆಯನ್ನಾಗಿ ಮಾಡಲು ನಾವೆಲ್ಲ ಕಂಕಣ ಬದ್ಧರಾಗಬೇಕೆಂದು ಅಭಿಪ್ರಾಯಪಟ್ಟರು.

ನವದೆಹಲಿಯಲ್ಲಿರುವ ಕನ್ನಡಿಗ 2015ನೇ ವರ್ಷದ ಬ್ಯಾಚಿನ ಐಎಫ್‌ಎಸ್ ಅಧಿಕಾರಿ ನಿಖಿಲ್ ಅವರು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಮಾತನಾಡಿ, ಐದು ವರ್ಷಗಳ ಕಾಲ ತಾವು ಚೀನಾದಲ್ಲಿ ಕೆಲಸ ನಿರ್ವಹಿಸುವ ಸಂದರ್ಭದ ಕೆಲವು ಸಂಗತಿಗಳನ್ನು ಬಹು ಸೊಗಸಾಗಿ ಮನಮುಟ್ಟುವಂತೆ ವಿವರಿಸಿದರು. ನಮ್ಮ ಭಾರತೀಯ ಸಂಸ್ಕೃತಿ ಅಮೋಘವಾಗಿದ್ದು ಚೀನಾ ದೇಶದಲ್ಲಿ ನಡೆಯುವ ಸಾಂಸ್ಕೃತಿಕ ಉತ್ಸವದಲ್ಲಿ ಬೇರೆ-ಬೇರೆ ದೇಶದ ಸಾಂಸ್ಕೃತಿಕ ಸಂಭ್ರಮಗಳ ಜೊತೆಗೆ ಭಾರತೀಯ ಕಲೆ ಸಂಸ್ಕೃತಿ ಪ್ರದರ್ಶನಗಳಲ್ಲಿ ಹೆಚ್ಚು ಸಮೃದ್ಧತೆ ಇರುವುದು ಎದ್ದು ಕಾಣುತ್ತದೆ. ನಮ್ಮ ದೇಶದ ಸಂಪದ್ಭರಿತ ಸಿರಿ ಸಂಸ್ಕೃತಿಯನ್ನು ಅಲ್ಲಿನವರು ಬಹು ಮುಕ್ತ ಕಂಠದಿಂದ ಶ್ಲಾಘಿಸುತ್ತಾರೆ ಎಂದು ತಮ್ಮ ಅನುಭವ ಹಂಚಿಕೊಂಡರು.

ಇನ್ನೋರ್ವ ಕನ್ನಡಿಗ ಐ.ಎಫ್.ಎಸ್ ಅಧಿಕಾರಿ ಸಂತೋಷ ಅವರು ಮಾತನಾಡುತ್ತಾ, ಕನ್ನಡವೂ ಸುಸಂಸ್ಕೃತ ಭಾಷೆಯಾಗಿದೆ. ವಿದೇಶ ಮಂತ್ರಾಲಯವು ಹೊರಡಿಸುವ ಸುದ್ದಿ ಪ್ರಕಟಣೆಯನ್ನು ಕನ್ನಡದಲ್ಲಿಯೂ ನೋಡಬಹುದಾಗಿದೆ ಎಂಬ ಮಾಹಿತಿಯನ್ನು ಈ ಸಂದರ್ಭದಲ್ಲಿ ತಿಳಿಸಿದರು. ಐಎಫ್‌ಎಸ್ ಅಧಿಕಾರಿಗಳಾದ ಪ್ರಮೋದ್, ಹಾಗು ಐಆರ್‌ಎಸ್ ಅಧಿಕಾರಿ ಸುಹಾಸ ಅವರು ಮಾತನಾಡಿದರು. ಬಂದರು ಮಂತ್ರಾಲಯದ ಇಲಾಖಾ ಸಲಹಾ ಮಂಡಳಿಯ ಅಧಿಕಾರಿ ಹೆಚ್. ಎನ್. ಅಶ್ವಥ್ ಅವರು ಈ ಸಂದರ್ಭದಲ್ಲಿ ಪ್ರತಿಕ್ರಿಯೆ ನೀಡಿದರು.

ಕಾರ್ಯಕ್ರಮಕ್ಕೆ ಬಂದಿದ್ದ ಎಲ್ಲ ಅತಿಥಿ ಗಣ್ಯರನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ದೆಹಲಿ ಕರ್ನಾಟಕ ಸಂಘದ ಮುಖವಾಣಿಯಾದ 'ಅಭಿಮತ' ಪತ್ರಿಕೆಯ ಪ್ರಧಾನ ಸಂಪಾದಕರಾದ ಎನ್.ಪಿ. ಚಂದ್ರಶೇಖರ್ ಅವರು ಈ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿ, ವರ್ತಮಾನದ ಸವಾಲುಗಳು ಅವುಗಳ ಪರಿಹಾರೋಪಾಯ ಕಂಡುಕೊಳ್ಳುವ ಬಗೆ, ಕನ್ನಡದ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಹಾಗೂ ಅದರ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಸಂದ ಅನುದಾನ ಮತ್ತಿತರ ವಿಚಾರ ವಿವರಗಳನ್ನು ವಿಸ್ತೃತವಾಗಿ ಹಂಚಿಕೊಂಡರು. ಸುಮಾರು ನಾಲ್ಕು ಗಂಟೆ ನಡೆದ ಕಾರ್ಯಕ್ರಮವನ್ನು ಅವರು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿ, ಕೊನೆಗೆ ವಂದನಾರ್ಪಣೆ ಸಲ್ಲಿಸಿದರು.

ಈ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್, ಖಜಾಂಚಿ ರಾಧಾಕೃಷ್ಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಮಾಲಿನಿ ಪ್ರಹ್ಲಾದ್, ಸವಿತಾ ನೆಲ್ಲಿ, ಪ್ರಭಾಕರ್ ಮಡ್ಡಿತೋಟ, ಎಂ. ಶಿವಪ್ಪ, ಸಂತೋಷ ಜೆ. ಸೇರಿದಂತೆ ಅಧಿಕ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಪಾಲ್ಗೊಂಡು ಯಶಸ್ವಿಗೊಳಿಸಿದರು.

**ಅಭಿಮತ ವರದಿ**

# ವಿಶೇಷ ಸಾಧನೆ ಮಾಡಿದ ದೆಹಲಿ ಎನ್.ಸಿ.ಆರ್. ಕನ್ನಡಿಗರ ಮಕ್ಕಳ ಸಂದರ್ಶನ

**ಕಳೆದ ಶೈಕ್ಷಣಿಕ ವರ್ಷದಲ್ಲಿ 10 ಮತ್ತು 12ನೇ ತರಗತಿಯಲ್ಲಿ ಅಧಿಕ ಅಂಕ ಗಳಸಿದ ಮಕ್ಕಳ ಸಂದರ್ಶನಕ್ಕಾಗಿ 'ಅಭಿಮತ' ಸಿದ್ಧಪಡಿಸಿದ ಪ್ರಶ್ನೆಗಳು ಹಾಗು ವಿದ್ಯಾರ್ಥಿಗಳ ಉತ್ತರಗಳ ಸಂಕ್ಷಿಪ್ತ ವರದಿಯನ್ನು ಓದುಗರಿಗಾಗಿ ನೀಡುತ್ತಿದ್ದೇವೆ.**

1. ನಿಮ್ಮ ಫಲಿತಾಂಶ ನಿಮಗೆ ತೃಪ್ತಿ ತಂದಿದೆಯೇ? ಇನ್ನೂ ಹೆಚ್ಚಿನ ಅಂಕಗಳನ್ನು ನಿರೀಕ್ಷೆ ಮಾಡಿದ್ದಿರಾ?
2. ನಿಮ್ಮ ಈ ಸಾಧನೆಗೆ ಬೆನ್ನೆಲುಬಾದ ನಿಮ್ಮ ಪೋಷಕರ ಪ್ರೋತ್ಸಾಹ ಹೇಗಿತ್ತು?
3. ನೀವು ಇಷ್ಟು ಒಳ್ಳೆಯ ಅಂಕ ಪಡೆಯುವಲ್ಲಿ ನೆರವಾದ ನಿಮ್ಮಶಾಲೆ, ಶಿಕ್ಷಕರು ಮೊದಲಾದವರ ಬಗ್ಗೆ ತಿಳಿಸಿ.
4. ನಿಮ್ಮ ಮುಂದಿನ ಗುರಿ ಏನು? ಅದನ್ನು ಸಾಧಿಸಲು ಹೇಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೀರಿ?
5. ಕಿರಿಯರಿಗಾಗಿ ನಿಮ್ಮ ಕಿವಿ ಮಾತು ಏನು?



**ಕುಮಾರಿ ಗಾನವಿ,** 12ನೇ ತರಗತಿ, 98.33%, ಶ್ರೀಮತಿ ಎಂ.ಎನ್. ಪಾರ್ವತಿ ಮತ್ತು ಶ್ರೀ ಗಿರೀಶ್ ಎಸ್ ಅವರ ಪುತ್ರಿ.

1. ಮೊದಲನೆಯದಾಗಿ ತಮಗೆ ಧನ್ಯವಾದಗಳು. ಫಲಿತಾಂಶವು ನಿರೀಕ್ಷೆಗೂ ಮೀರಿ ಖುಷಿ ತಂದಿದೆ. ಎರಡು ವರ್ಷದ ಶ್ರಮ ಹಾಗೂ ಶ್ರದ್ದೆ ಫಲಕೊಟ್ಟಿದೆ.


2 ಹತ್ತನೆ ತರಗತಿಯ ಫಲಿತಾಂಶ ಬಂದ ನಂತರ ನಾನು ಬೋರ್ಡಿಂಗ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡಬೇಕು ಎಂದು ಕೇಳಿದಾಗ ನನ್ನ ತಂದೆ ತಾಯಿಗಳು ಮಂಗಳೂರಿನ ಎಕ್ಸ್‌ಪರ್ಟ್ ಪಿ.ಯು. ಕಾಲೇಜಿಗೆ ನನ್ನನ್ನು ಸೇರಿಸಿದರು. ನನ್ನ ತಂದೆ ತಾಯಿ ಯಾವತ್ತೂ ನನಗೆ ಯಾವುದೇ ರೀತಿಯ ಒತ್ತಡ ಹೇರಲಿಲ್ಲ.

3. ನಮ್ಮ ಶಾಲೆಯ ಶಿಕ್ಷಕರು ತುಂಬಾ ಚೆನ್ನಾಗಿ ಪಾಠ ಹೇಳಿ ಕೊಡುತ್ತಿದ್ದರು. ಹಾಗೇಯೇ ನಮಗೇನಾದರು ಪ್ರಶ್ನೆಗಳಿದ್ದರೆ ಯಾವ ಸಮಯದಲ್ಲಿ ಹೋದರೂ ಅದನ್ನ ಸರಿಪಡಿಸಿ ಕೊಡುತ್ತಿದ್ದರು. ಅಲ್ಲಿ ನಮಗೆ ಓದುವುದನ್ನು ಬಿಟ್ಟರೆ ಬೇರೆ ಯಾವ ಆಟೋಟಗಳಾಗಲಿ, ಮತ್ತಿನ್ನಿತರ ಮನರಂಜನೆ ಇರಲಿಲ್ಲ. ಹಾಗಾಗಿ ಇಷ್ಟು ಅಂಕಗಳನ್ನು ಪಡೆಯಲು ಸಾಧ್ಯವಾಯಿತು.

4. ನನ್ನ ಮುಂದಿನ ಗುರಿ ವೈದ್ಯಳಾಗುವುದು, ಅದಕ್ಕೆ ಈಗಾಗಲೇ ನೀಟ್ ಪರೀಕ್ಷೆಯನ್ನು ಬರೆದಿರುತ್ತೇನೆ.ಉತ್ತಮ ಫಲಿತಾಂಶಕ್ಕಾಗಿ ಕಾಯುತ್ತಿದ್ದೇನೆ. ಮತ್ತೆ ಈಗಾಗಲೆ ಕೆಸಿಇಟಿ ಪರೀಕ್ಷೆಯನ್ನು ಬರೆದಿದ್ದು ಕರ್ನಾಟಕ ರಾಜ್ಯದಲ್ಲಿ ಇಂಜಿನಿಯರಿಂಗ್‌ನಲ್ಲಿ 1729 ನೇ ರ್‍ಯಾಂಕ್ ಬಂದಿರುತ್ತೆ. ಒಳ್ಳೆಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ಸಿಗುತ್ತೆ.ಆದರೆ ನೀಟ್‌ನ ಫಲಿತಾಂಶಕ್ಕಾಗಿ ಕಾಯುತ್ತಿದ್ದೇನೆ.

5. ನನ್ನ ಕಿರಿಯರಿಗೆ ಹೇಳುವುದೇನೆಂದರೆ, ಶ್ರದ್ದೆಯಿಂದ ಓದಿ. ಜೊತೆಗೆ ಹೆಚ್ಚು ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿ. ಹಿಂದೆ ನಡೆದಿರುವ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಬಗ್ಗೆ ಗಮನ ಹರಿಸಿ. ಸುಮ್ಮನೆ ಕಾಲಹರಣ ಮಾಡುವುದರಲ್ಲಿ ಏನು ಪ್ರಯೋಜನವಿಲ್ಲ ಕಳೆದು ಹೋದ ಸಮಯ ಮತ್ತೆ ನಿಮಗೆ ಸಿಗಲ್ಲ, ಹಾಗೇಯೇ ತಂದೆ ತಾಯಿ ಹಾಗೂ ಗುರುಗಳ ಮಾರ್ಗದರ್ಶನವನ್ನು ನಿಮ್ಮಲ್ಲಿ ಅಳವಡಿಸಿಕೊಳ್ಳಿ. ಅವರು ಮಕ್ಕಳ ಭವಿಷ್ಯ ರೂಪಿಸುವುದಕ್ಕೆ ಹಗಲು ರಾತ್ರಿ ಶ್ರಮ ಪಡುತ್ತಾರೆ. ಅವರ ಆಸೆಯನ್ನು ಹುಸಿಗೊಳಿಸ ಬೇಡಿ ಹಾಗೇಯೇ ಯಾವುದೇ ಕಾರಣಕ್ಕೂ ತಂದೆ ತಾಯಿ ಹತ್ತಿರ ಸುಳ್ಳು ಹೇಳಬೇಡಿ. ಅವರ ಮನಸ್ಸು ನೋಯಿಸ ಬೇಡಿ. ಓದುವ ಸಮಯದಲ್ಲಿ ಓದಿ, ನಾಳೆ ಮಾಡುವ ಕಾರ್ಯ ಇಂದೆ ಮಾಡಿ. ಇಂದು ಮಾಡುವ ಕಾರ್ಯ ಈಗಲೆ ಮಾಡಿ. ನಿದ್ದೆ ಬಂದಿಲ್ಲ ಅಂತ ಟೀವಿ, ಮೊಬೈಲ್ ನೋಡುವ ಬದಲು ಚೆನ್ನಾಗಿ ಅಭ್ಯಾಸ ಮಾಡಿ, ಜೀವನದಲ್ಲಿ ಎಂಜಾಯ್ ಮಾಡಲು ಬೇಕಾದಷ್ಟು ಸಮಯ ನಿಮಗೆ ಸಿಗುತ್ತದೆ. ಆದಷ್ಟು ಮೊಬೈಲ್‌ನಿಂದ ದೂರವಿರಿ.

ಧನ್ಯವಾದಗಳು.



**ಕುಮಾರಿ ಶ್ರೇಯಾ ಟಿ.,** 12ನೇ ತರಗತಿ, 97.6%, ಶ್ರೀಮತಿ ಭಾರತಿ ಟಿ ಮತ್ತು ಶ್ರೀ ಪಿ. ತಿಪ್ಪೇಸ್ವಾಮಿ ಅವರ ಪುತ್ರಿ.

1. ನನ್ನ ಫಲಿತಾಂಶ ನೋಡಿ ನನಗೆ ಸಂತೋಷವಾಯಿತು. ನಾನು ಪಟ್ಟಿದ್ದ ಶ್ರಮ ಸಾರ್ಥಕ ಎನಿಸಿತು. ಮುಂದೆಯೂ ಉತ್ತಮ ಸಾಧನೆ ಮಾಡಲು ಪ್ರೋತ್ಸಾಹ ಸಿಕ್ಕಿದ ಹಾಗಾಯಿತು.

2. ನನ್ನ ಈ ಫಲಿತಾಂಶಕ್ಕೆ ನನ್ನ ಪೋಷಕರ ಸಹಕಾರ ಬಹಳ ಮುಖ್ಯವಾಗಿತ್ತು. ಅವರು ನನಗೆ ಸಮಯಕ್ಕೆ ಸರಿಯಾಗಿ ಕೊಡುತ್ತಿದ್ದ ಸಹಕಾರ ಮತ್ತು ಸಲಹೆ ನನ್ನ ಗುರಿ ತಲುಪಲು ಸಹಾಯವಾಯಿತು.

3. ನಮ್ಮ ಶಾಲೆಯಲ್ಲಿ ಪ್ರತಿವಾರವೂ ನಡೆಸುತ್ತಿದ್ದ ಕಿರು ಪರೀಕ್ಷೆಯಿಂದ ನಮಗೆ ನಮ್ಮ ಸಾಮರ್ಥ್ಯವನ್ನು ಉತ್ತಮಗೊಳಿಸಲು ಸಹಾಯವಾಯಿತು ಮತ್ತು ಕೊರೊನಾದಂತಹ ಸಮಯದಲ್ಲೂ ಶಿಕ್ಷಣದ ಮಟ್ಟ ಕುಂಠಿತಗೊಳಿಸಲಿಲ್ಲ. ಅವರು ಪಟ್ಟ ಶ್ರಮ ಅಪಾರ. ಅವರಿಗೆ ನನ್ನ ಕೃತಜ್ಞತೆಗಳು.

4. ನನ್ನ ಮುಂದಿನ ಗುರಿ ಇಂಜಿನಿಯರಿಂಗ್ ವಿದ್ಯಾಭ್ಯಾಸ. ನನಗೆ ಸಾಫ್ಟ್‌ವೇರ್‌ನಲ್ಲಿ ಸೇವೆ ಸಲ್ಲಿಸುವ ಆಸೆ ಇದೆ. ಅದಕ್ಕಾಗಿ ನಾನು ವಿವಿಧ ವಿಶ್ವವಿದ್ಯಾಲಯಗಳ ಪ್ರವೇಶ ಪರೀಕ್ಷೆ ಬರೆದಿದ್ದೇನೆ.

5. ಸತತ ಶ್ರಮ, ಅಭ್ಯಾಸ ಮತ್ತು ದೃಢವಾದ ಮನಸ್ಸು ಅತೀ ಮುಖ್ಯ. ಮನಸ್ಸನ್ನು ಸಂತೋಷ ಮತ್ತು ಸಮಾಧಾನದಿಂದಿಟ್ಟಿರುವುದು ಬಹಳ ಅವಶ್ಯಕ. ನಿಮ್ಮ ಗುರಿ ಉತ್ತಮ ಅಂಕ ಮತ್ತು ಉತ್ತಮ ವ್ಯಕ್ತಿಯಾಗುವತ್ತ ಇರಲಿ. ಇದು ನನ್ನ ಕಿವಿ ಮಾತು.



**ಕುಮಾರಿ ನಿಧಿ ಶ್ರೀಕಾಂತ್,** 12ನೇ ತರಗತಿ, 95.6%, ಶ್ರೀಮತಿ ಲಕ್ಷ್ಮೀ ಶ್ರೀಕಾಂತ್ ಮತ್ತು ಶ್ರೀ ಶ್ರೀಕಾಂತ್ ರಾಮಚಂದ್ರಯ್ಯ ಅವರ ಪುತ್ರಿ.

1. ನಮಸ್ಕಾರ, ಈ ಫಲಿತಾಂಶ ನನಗೆ ಮತ್ತು ನನ್ನ ಪೋಷಕರಿಗೆ ಸಂತೋಷವನ್ನು ಉಂಟುಮಾಡಿದೆ. ಪರಿಶ್ರಮ, ಶ್ರದ್ಧೆ ಹಾಗು ಶಿಸ್ತುಬದ್ಧ ವ್ಯಾಸಂಗ ಇದಕ್ಕೆ ಕಾರಣ ಎಂದು ಹೇಳಬಯಸುತ್ತೇನೆ.

2. ಪೋಷಕರ ನಿರಂತರ ಪ್ರೋತ್ಸಾಹ ಹಾಗೂ ಆತ್ಮವಿಶ್ವಾಸ ನಿರ್ಮಾಣ ಅತ್ಯಂತ ಮಹತ್ವಪೂರ್ಣ.

3. ನನ್ನ ಶಾಲೆಯ ಶಿಕ್ಷಕ ವೃಂದ ಮೊದಲಿಂದಲೂ ಉತ್ತಮ ರೀತಿಯ ಶಿಕ್ಷಣ, ಅನುಮಾನಗಳ ಸ್ಪಷ್ಟೀಕರಣ ಹಾಗೂ ಪರಿಷ್ಕರಣೆಯನ್ನು ನಡೆಸಿಕೊಂಡು ಬಂದಿದ್ದು ಬಹಳ ಅನುಕೂಲವಾಯಿತು .

4. ನಾನು ಮುಂದೆ ಕಂಪ್ಯೂಟರ್ ವಿಜ್ಞಾನ ಎಂಜಿನಿಯರಿಂಗ್ನಲ್ಲಿ ಪದವಿ ಹಾಗೂ ತಂತ್ರಜ್ಞಾನದಲ್ಲಿ ಮಾಸ್ಟರ್ಸ್ ಪದವಿ ಹೊಂದಲು ಇಚ್ಛಿಸುತ್ತೇನೆ.

5. ಸಾಧನೆಗೆ ಯಾವುದೂ ಅಸಾಧ್ಯವಲ್ಲ, ಪರಿಶ್ರಮ ಮತ್ತು ಆತ್ಮವಿಶ್ವಾಸ ಯಾವಾಗಲೂ ಜೊತೆಯಲ್ಲಿ ಇರಲಿ.

ಧನ್ಯವಾದಗಳು.



**ಕುಮಾರಿ ಪ್ರಾಂಜಲಿ ಎಸ್. ಹುನಗುಂದ,** 12ನೇ ತರಗತಿ, 95%, ಶ್ರೀಮತಿ ಅಖಿಲಾ ಹುನಗುಂದ್ ಮತ್ತು ಶ್ರೀ ಸತೀಶ್ ಕುಮಾರ್ ಹುನಗುಂದ್ ಅವರ ಪುತ್ರಿ.

1. ಪ್ರಿಯ ಓದುಗರೆ, ನನ್ನ ಫಲಿತಾಂಶ ತಿಳಿದಾಗ ನನಗೆ ತುಂಬಾ ಸಂತೋಷವಾಯಿತು. ನನ್ನಲ್ಲಿ ಆತ್ಮವಿಶ್ವಾಸ ಹೆಚ್ಚಾಯಿತು.


2. ನನ್ನ ಪೋಷಕರು ನನಗೆ ತುಂಬಾ ಪ್ರೋತ್ಸಾಹ ಕೊಟ್ಟರು. ನನ್ನ ಅಭ್ಯಾಸಕ್ಕೆ ಪ್ರತಿಕೂಲವಾದ ವಾತಾವರಣವನ್ನು ನನಗೆ ಸತತವಾಗಿ ಒದಗಿಸಿಕೊಟ್ಟರು. ನನ್ನ ಸಾಧನೆಗೆ ಅನುಕೂಲವಾಗಲು ಎಲ್ಲಾ ರೀತಿಯ ಸಹಾಯವನ್ನೂ ಅವರು ಮಾಡಿದರು. ಅದಕ್ಕಾಗಿ ನಾನು ಅವರಿಗೆ ಚಿರಋಣಿ.

3. ನನ್ನ ಶಾಲೆ ಹಾಗೂ ನನ್ನ ಶಿಕ್ಷಕರ ಪಾತ್ರ ನನ್ನ ಸಾಧನೆಯಲ್ಲಿ ಬಲು ದೊಡ್ಡದು. ನಾನು

ನನ್ನ ಅಭ್ಯಾಸದ ಪ್ರಶ್ನೆಗಳನ್ನು ನಡುರಾತ್ರಿಯಲ್ಲಿ ಕೇಳಿಯೂ ತಕ್ಷಣ ನನ್ನ ಶಿಕ್ಷಕರಿಂದ ಉತ್ತರ ಪಡೆದ ಉದಾಹರಣೆಗಳಿವೆ. ಅವರೆಲ್ಲರ ಒಲವಿನ ಆಶೀರ್ವಾದ ಪಡೆದ ನಾನೇ ಧನ್ಯ. ನನ್ನೆಲ್ಲ ಶಿಕ್ಷಕರಿಗೆ ನನ್ನ ಹೃದಯಪೂರ್ವಕ ಧನ್ಯವಾದಗಳು.

4. ನಾನು ಒಬ್ಬ ಒಳ್ಳೆಯ ವೈದ್ಯಳಾಗಬೇಕೆಂದು ಬಯಸಿದ್ದೇನೆ. ವೈದ್ಯ ವೃತ್ತಿಯಲ್ಲಿ ಸಮಾಜಸೇವೆಯನ್ನು ಮಾಡುತ್ತಾ ದೇಶಕ್ಕೆ ಒಳ್ಳೆಯ ಹೆಸರು ತರಬೇಕು, ಏನಾದರೂ ಕೊಡುಗೆ ಕೊಡಬೇಕು ಎಂಬ ಆಸೆ. ಈ ದಿಶೆಯಲ್ಲಿ ಪ್ರಯತ್ನಿಸಲು ನಾನು ನೀಟ್ ಪರೀಕ್ಷೆಯನ್ನು ಕೊಟ್ಟಿರುತ್ತೇನೆ. ವೈದ್ಯಕೀಯ ಕಾಲೇಜಿಗೆ ಪ್ರವೇಶ ಸಿಕ್ಕ ಮೇಲೆ ನಾನು ಪರಿಶ್ರಮಪಟ್ಟು ಓದಿ ಒಬ್ಬ ಒಳ್ಳೆಯ ವೈದ್ಯಳಾಗುತ್ತೇನೆ.

5. ನಾನು ಹೇಳಬಯಸುವುದಿಷ್ಟೆ ಪರೀಕ್ಷೆಗಾಗಿ ಓದಬೇಡಿ ಆದರೆ ಜ್ಞಾನ ಸಂಪಾದನೆಗಾಗಿ ಪ್ರಾಮಾಣಿಕತೆಯಿಂದ ಓದಿ. ಹಾಗೆ ಓದಿದಾಗ, ಪರೀಕ್ಷೆಯನ್ನು ಸಲೀಸಾಗಿ ಎದುರಿಸಬಹುದು. ಅಂಕಗಳೂ ಕೂಡ ಚೆನ್ನಾಗಿ ಬರುವವು. ಪ್ರಾರಂಭದಲ್ಲಿ ಕಡಿಮೆ ಅಂಕಗಳು ಬಂದರೂ ಎದೆಗುಂದದೆ ಇನ್ನೂ ಪ್ರಯತ್ನ ಪಡಬೇಕು. ಆಗ ಯಶಸ್ಸು ಖಂಡಿತವಾಗಿ ಸಾಧ್ಯ.



**ಕುಮಾರಿ ಪ್ರಜಸ್ವಿ ಎಸ್. ಹುನಗುಂದ,** 10ನೇ ತರಗತಿ, 98%, ಶ್ರೀಮತಿ ಅಖಿಲಾ ಹುನಗುಂದ್ ಮತ್ತು ಶ್ರೀ ಸತೀಶ್ ಕುಮಾರ್ ಹುನಗುಂದ್ ಅವರ ಪುತ್ರಿ.

1. ಆತ್ಮೀಯ ಸ್ನೇಹಿತರೇ, ಪರೀಕ್ಷೆಗಾಗಿ ನಾನು ಬಹಳ ಪ್ರಯತ್ನಪಟ್ಟು ಅಭ್ಯಾಸ ಮಾಡಿದ್ದೆ ಮತ್ತು ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿ ಇದ್ದೆ. ಅದರಂತೆ ನನ್ನ ಫಲಿತಾಂಶ ಪ್ರಕಟವಾದಾಗ ನನಗೆ ತುಂಬಾ ಖುಷಿಯಾಯಿತು. **'ಕೈ ಕೆಸರಾದರೆ ಬಾಯಿ ಮೊಸರು'** ಎಂಬ ಗಾದೆ ಮಾತು ನಿಜ ಎಂಬ ಅರಿವಾಯಿತು.

2. ನನ್ನ ಈ ಸಾಧನೆಗೆ ನನ್ನ ಪೋಷಕರ ಪ್ರೋತ್ಸಾಹ ಸತತವಾಗಿತ್ತು. ನನ್ನ ಅಜ್ಜ-ಅಜ್ಜಿ ಮೂಲಾಕ್ಷರಗಳನ್ನು ಹಾಕಿಕೊಟ್ಟು ಕಲಿಸಿದ್ದರು. ಮುಂದೆ ನನ್ನ ತಂದೆ ತಾಯಿಗಳು ನಮ್ಮ ಜೀವನದಲ್ಲಿ ಕಷ್ಟಪಟ್ಟು ಓದುವ ಬಗೆಗಿನ ಅರಿವನ್ನು ನನ್ನಲ್ಲಿ ಮೂಡಿಸಿದರು. ನನ್ನ ಈ ಸಾಧನೆಗೆ ಅವರಿಗೆ ಎಷ್ಟು ಧನ್ಯವಾದಗಳನ್ನು ಹೇಳಿದರೂ ಕಡಿಮೆಯೇ.

3. ನಾನು ಒಳ್ಳೆಯ ಅಂಕ ಪಡೆಯಲು ನೆರವಾದ ನನ್ನ ಶಾಲೆಯನ್ನು, ಶಾಲಾ ಶಿಕ್ಷಕರನ್ನು ಮರೆಯಲು ಸಾಧ್ಯವೇ? **"ಹರ ಮುನಿದರೂ ಗುರು ಕಾಯುವನಂತೆ"**-ಹಾಗೆಯೇ ನಾನು ಎಷ್ಟು ತಪ್ಪುಗಳನ್ನು ಮಾಡಿದರೂ ಸಿಟ್ಟಾಗದೇ ತಿದ್ದಿ-ತೀಡಿ, ಪಾಠ ಬೋಧಿಸಿದರು. ಅವರೆಲ್ಲರ ಪ್ರೀತಿಯ ಆಶೀರ್ವಾದದಿಂದ ಒಳ್ಳೆಯ ಅಂಕಗಳನ್ನು ಪಡೆಯಲು ಸಾಧ್ಯವಾಯಿತು.

4. ನನಗೆ ಮೊದಲಿನಿಂದಲೂ ವಿಜ್ಞಾನದ ವಿಷಯಗಳಲ್ಲಿ ಆಸಕ್ತಿ ಹೆಚ್ಚು. ಆದ್ದರಿಂದ ಇದೇ ವಿಷಯಗಳನ್ನು ಪ್ರಧಾನವಾಗಿ ಓದಿ ಒಬ್ಬ ಒಳ್ಳೆಯ ಇಲೆಕ್ಟ್ರಾನಿಕ್ ಇಂಜಿನಿಯರ್ ಆಗಲು ಬಯಸುತ್ತೇನೆ. ಈ ದಿಶೆಯಲ್ಲಿ ಮುಂದುವರೆಯಲು ಈಗಿನಿಂದಲೇ ಕಷ್ಟಪಟ್ಟು ಓದಲು ಪ್ರಯತ್ನಿಸುತ್ತಿದ್ದೇನೆ.

5. ಒಬ್ಬ ವಿದ್ಯಾರ್ಥಿಯಾಗಿ ನಾವು ಕಷ್ಟಪಟ್ಟು ಓದುವ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಬೇಕು. ಫಲಿತಾಂಶದ ಬಗ್ಗೆ ಹೆಚ್ಚು ಗಮನ ಕೊಡಬಾರದು.



**ಕುಮಾರಿ ದೇವಿಕಾ ಅರಳಿ,** 10ನೇ ತರಗತಿ, 95.14%, ಶ್ರೀಮತಿ ನಾಗರೇಖಾ ಮತ್ತು ಶ್ರೀ ಅನಂತ ರಾಮ ಅರಳಿ ಅವರ ಪುತ್ರಿ.

1. ನನ್ನ ಫಲಿತಾಂಶ ಬಹುತೇಕ ನಾನು ನಿರೀಕ್ಷಿಸಿದಂತೆಯೇ ಬಂದಿದೆ. ಆದಾಗ್ಯು ನನ್ನ ತಂದೆ ತಾಯಿಗಳ ನಿರೀಕ್ಷೆ ಮಾಡಿದ್ದಕ್ಕಿಂತ ಸ್ವಲ್ಪ ಕಡಿಮೆಯಾಗಿದೆ.

2. ನನ್ನ ಅಪ್ಪ ಅಮ್ಮ ಈ ಪ್ರಯಾಸದಾಯಕ ಪಯಣದಲ್ಲಿ ನಾನು ದಣಿವರಿಯದಂತೆ, ಹೆಚ್ಚೇನೂ ತೊಂದರೆಯಿಲ್ಲದೆ ಸಾಗಲು ಅಪೇಕ್ಷಿಸಿದ ಎಲ್ಲಾ ರೀತಿಯ ಸಹಾಯ, ಸಹಕಾರವನ್ನು ಒದಗಿಸಿದರು. ಅವರೇ ನನಗೆ ದೊಡ್ಡ ಆಸರೆ ಮತ್ತು ಪ್ರೇರಕರಾಗಿದ್ದಾರೆ.

3. ನನಗೆ ಕಲಿಸಿದ ಶಿಕ್ಷಕರು ಈ ನನ್ನ ಪ್ರಯತ್ನಕ್ಕೆ ಬೆನ್ನೆಲುಬಾಗಿದ್ದರು. ಅಲ್ಲದೇ ಪಠ್ಯ ವಿಷಯ ನನಗೆ ಮನದಟ್ಟಾಗಿದೆ ಎಂದು ಖಚಿತಪಡಿಸಿಕೊಳ್ಳುತ್ತಿದ್ದರು. ಹಾಗಾಗಿಯೇ ನಾನು 10ನೇ ತರಗತಿಯಲ್ಲಿ ಇಷ್ಟು ಉತ್ತಮ ಅಂಕ ಪಡೆಯಲು ನೆರವಾಯಿತು. ನನ್ನ ಎಲ್ಲ ಶಿಕ್ಷಕರು ಯಾವಾಗಲೂ ನಾನು ಕೇಳುವ ಪ್ರಶ್ನೆಗಳಿಗೆ ಸರಳವಾಗಿ ಮಾತು ಚೆನ್ನಾಗಿ ಅರ್ಥವಾಗುವಂತೆ ಉತ್ತರ ಹೇಳಿಕೊಡುತ್ತಿದ್ದರು. ಹಾಗಾಗಿಯೇ ಅತ್ಯಂತ ಕ್ಲಿಷ್ಟಕರ ಪರಿಕಲ್ಪನೆಗಳನ್ನು ಕೂಡ ಅತ್ಯಂತ ಸುಲಭವಾಗಿ ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗಿತ್ತು.

4. ನನ್ನ ಗುರಿ ಅಧ್ಯಯನದತ್ತ ಗಮನವನ್ನು ಕೇಂದ್ರೀಕರಿಸಿ, 12ನೇ ತರಗತಿಯ ಹಾಗೂ ಮುಂಬರುವ ಪ್ರವೇಶ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸುವುದು. ಸಾಫ್ಟ್‌ವೇರ್ ಇಂಜಿನಿಯರಿಂಗ್‌ನಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ವಿಷಯವನ್ನ ಆಯ್ಕೆ ಮಾಡಿಕೊಳ್ಳುವುದು ಅಥವಾ ಮೆಕ್ಯಾನಿಕಲ್ ಇಂಜಿನಿಯರ್ ಆಗುವುದು ನನ್ನ ಕನಸು. ಆ ಕನಸನ್ನು ಕಾರ್ಯಗೊಳಿಸಲು ಆ ದಿಶೆಯಲ್ಲಿ ನನ್ನ ಪ್ರಯತ್ನ.

5. ಕಿರಿಯರಿಗೆ ನನ್ನ ಕಿವಿಮಾತೇನೆಂದರೆ ನೀವು ಶೈಕ್ಷಣಿಕ ವರ್ಷದ ಆರಂಭದ ದಿನದಿಂದಲೇ ಎಲ್ಲಾ ವಿಷಯಗಳನ್ನ ತಪ್ಪದೇ ಓದಿ ಕರಗತ ಮಾಡಿಕೊಳ್ಳಬೇಕು. ಕೊನೆ ಕ್ಷಣದವರೆಗೂ ಕಾಲತಳ್ಳುತ್ತಾ, ವಿಳಂಬ ಮಾಡದೆ ಪರೀಕ್ಷಾ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ನಿಮ್ಮ ಜೊತೆಗಿರುವ ಎಲ್ಲರನ್ನೂ, ಅಂದರೆ ಪೋಷಕರಿರಲಿ, ಶಾಲಾ ಶಿಕ್ಷಕರಿರಲಿ ಹಾಗೂ ಗೆಳೆಯರಿರಲಿ ಅವರನ್ನು ಗೌರವದಿಂದ ಕಾಣಬೇಕು. ನಿಮ್ಮ ಈ ಓದಿನ ಪಯಣದಲ್ಲಿ ಅವರು ಸದಾ ನಿಮ್ಮೊಂದಿಗಿದ್ದು ನಿಮ್ಮ ದಾರಿಯನ್ನು ಸುಗಮಗೊಳಿಸಿ ನಿಮ್ಮ ಅತ್ಯುತ್ತಮ ಸಾಧನೆಗೆ ಮಾರ್ಗದರ್ಶನ ಮಾಡುತ್ತಾರೆ.

ನನಗೆ ಈ ಸಂದರ್ಶನಕ್ಕೆ ಅವಕಾಶ ನೀಡಿ, ನನ್ನ ಭಾವನೆಗಳನ್ನು ಹಂಚಿಕೊಳ್ಳಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಇದು ಇತರರಿಗೂ ಪ್ರೇರಣೆಯಾಗಬಹುದೆಂದು ಭಾವಿಸುತ್ತೇನೆ. ಮತ್ತೊಮ್ಮೆ ಧನ್ಯವಾದಗಳು.



**ಕುಮಾರ ಸಮನ್ಯು ಶಶಿಕುಮಾರ್ ಮುಗ್ಳೂರು,** 10ನೇ ತರಗತಿ, 94%, ಶ್ರೀಮತಿ ವೈ.ಎ. ರಾಜಶ್ರೀ ಮತ್ತು ಡಾ. ಮುಗ್ಳೂರು ಶ್ರೀಕಂಠಯ್ಯ ಶಶಿಕುಮಾರ್ ಅವರ ಪುತ್ರ.

1. ಶೇಕಡಾವಾರು ಇಷ್ಟು ಅಂಕಗಳನ್ನು ಗಳಿಸಿರುವುದು ತುಂಬಾ ಹರ್ಷದಾಯಕ ಮತ್ತು ಸಂತೋಷಕರ ಅನುಭವವಾಗಿದೆ. ನನ್ನ ಹೆತ್ತವರು ನನ್ನ ಬಗ್ಗೆ ಹೆಮ್ಮೆಪಡುವುದನ್ನು ಕಂಡು ನಿಜವಾಗಿಯೂ ಸಂತೋಷವಾಯಿತು, ಮತ್ತು ಇದನ್ನು ನೋಡುವುದೇ ನನ್ನ ಜೀವನದಲ್ಲಿ ಸಿಕ್ಕ ದೊಡ್ಡ ತೃಪ್ತಿಯಾಗಿದೆ.

2. ಹೌದು, 10ನೇ ತರಗತಿಯ ನನ್ನ ಪ್ರಯಾಣದ ಉದ್ದಕ್ಕೂ ನನ್ನ ತಂದೆ ತಾಯಿಗಳು ಪ್ರೋತ್ಸಾಹಿಸಿದರು. ನನಗೆ ಅನುಕೂಲಕ್ಕೆ ಬೇಕಾದ ಎಲ್ಲವನ್ನೂ ಒದಗಿಸುತ್ತಿದ್ದರು. ಇಡೀ 10 ನೇ ತರಗತಿಯ ನನ್ನ ಪ್ರಯಾಣದ ಪ್ರಮುಖ ಭಾಗವಾಗಿದ್ದರು.

3. ಈ ರೀತಿಯ ಉತ್ತಮ ಅಂಕಗಳಿಗೆ ನನ್ನ ಶಿಕ್ಷಕರು ನನಗೆ ಸಾಕಷ್ಟು ಸಹಾಯ ಮಾಡಿದರು. ನಮ್ಮ ಅಧ್ಯಯನಗಳು ಆನ್‌ಲೈನ್‌ನಲ್ಲಿದ್ದವಾದರೂ, ಅವರು ಪಾಠ ಪ್ರವಚನಗಳನ್ನು ಪುನರಾವರ್ತನೆ ಮಾಡಿ, ನಮಗೆ ಅಭ್ಯಾಸ ಮಾಡಿಸುವಲ್ಲಿ ಯಾವುದೇ ರಾಜಿ ಮಾಡಿಕೊಳ್ಳಲಿಲ್ಲ. ಶಿಕ್ಷಕರು ಯಾವಾಗಲೂ ವಿದ್ಯಾರ್ಥಿಗಳ ಪ್ರಮುಖ ಮಾರ್ಗದರ್ಶಕರಾಗಿರುತ್ತಾರೆ ಮತ್ತು ಅವರಿಗೆ ಕಟ್ಟ ಕಡೆಯ ವಿಜಯದ ಮಾರ್ಗವನ್ನು ತೋರಿಸುತ್ತಾರೆ.

4. ಹೌದು, ನಾನು ಪ್ರಾಣಿಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಮಾಡಿ ಪ್ರಾಣಿ ವಿಜ್ಞಾನಿ / ಸಂರಕ್ಷಣಾವಾದಿ ಆಗಬೇಕೆಂಬುದು ನನ್ನ ಗುರಿಯಾಗಿದೆ. ಇದು ಇನ್ನೂ ಹೆಚ್ಚಾಗಿ ಪರಿಶೋಧನೆ ನಡೆಯದಿರುವ ಕ್ಷೇತ್ರವಾಗಿದ್ದು, ಇದಕ್ಕೆ ಆಳವಾದ ಪೂರ್ವ ಜ್ಞಾನ ಮತ್ತು ಕಠಿಣ ಪರಿಶ್ರಮದ ಅಗತ್ಯವಿರುತ್ತದೆ. ನಾನು ಭಾರತದಲ್ಲಿರುವ ಅತ್ಯುತ್ತಮ ಕಾಲೇಜಿನಲ್ಲಿ ಪ್ರವೇಶ ಪಡೆಯುವ ನನ್ನ ಗುರಿಯನ್ನು ತಲುಪಲು ಕೆಲಸ ಮಾಡುತ್ತಿದ್ದೇನೆ. ಇದಲ್ಲದೆ, ಮುಂದಿನ ನನ್ನ ಉನ್ನತ ಅಧ್ಯಯನಕ್ಕಾಗಿ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಗೆ ಸೇರಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇನೆ.

5. ಈಗಷ್ಟೇ ತೇರ್ಗಡೆಯಾಗಿ 10 ನೇ ತರಗತಿ ಓದುತ್ತಿರುವ ನನ್ನ ಪ್ರೀತಿಯ ಸಹೋದರ ಸಹೋದರಿಯರಿಗೆ ನಾನು ನೀಡಲು ಬಯಸುವ ಒಂದೇ ಒಂದು ಸಲಹೆ ಏನೆಂದರೆ ತರಗತಿಗಳಲ್ಲಿ ನೀವು ಯಾವಾಗಲೂ ಕಷ್ಟಪಟ್ಟು ಲಕ್ಷ್ಯವಿಟ್ಟು ಅಧ್ಯಯನ ಮಾಡಿ. ಕಠಿಣ ಪರಿಶ್ರಮ ಯಾವಾಗಲೂ ಉತ್ತಮ ಪ್ರತಿಫಲವನ್ನೇ ನೀಡುತ್ತದೆ. 10 ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೂ ನನ್ನ ಶುಭಾಶಯಗಳು.

(ವಿದ್ಯಾರ್ಥಿಗಳ ಸಂದರ್ಶನ ಮುಂದುವರಿಯುವುದು)

# ದೆಹಲಿ ಕನ್ನಡ ಶಾಲೆಯ ಕಾರ್ಯಕ್ರಮಗಳು

## 'ಕನ್ನಡಕ್ಕೊಬ್ಬರೇ ಟಿ.ಪಿ. ಕೈಲಾಸಂ'

ಕರ್ನಾಟಕ ಪ್ರಹಸನ ಪಿತಾಮಹ, ಆಧುನಿಕ ಕನ್ನಡ ರಂಗಭೂಮಿಯ ಹರಿಕಾರರಾದ ಟಿ. ಪಿ. ಕೈಲಾಸಂ ಅವರ ಜನ್ಮದಿನದ ಪ್ರಯುಕ್ತ 'ಕನ್ನಡಕೊಬ್ಬರೇ ಕೈಲಾಸಂ' ಕಾರ್ಯಕ್ರಮವನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ಜುಲೈ 29ರಂದು ನಿಸ್ತಂತು ಮಾಧ್ಯಮದ ಮೂಲಕ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಬೆಂಗಳೂರು ಗ್ರಾಮಾಂತರದ ಹೊಸಕೋಟೆಯ ಕನ್ನಡ ಉಪನ್ಯಾಸಕರು, ರಂಗಕರ್ಮಿ, ವಿಮರ್ಶಕರಾದ ಶ್ರೀ ಜಗದೀಶ ಕೆಂಗನಾಳ್ ಅವರು ಮಾತನಾಡಿ ತಮಿಳು ಮೂಲದ ಮನೆತನದಿಂದ ಬಂದವರಾದ ಕೈಲಾಸಂ ಆಧುನಿಕ ಕನ್ನಡ ನಾಟಕ ಕ್ಷೇತ್ರಕ್ಕೆ ಟಿ.ಪಿ. ಕೈಲಾಸಂ ಅವರ ಕೊಡುಗೆ ಅಪಾರ, ಅದಕ್ಕಾಗಿಯೆ ಅವರನ್ನು 'ಕರ್ನಾಟಕ ಪ್ರಹಸನ ಪಿತಾಮಹ' ಎಂದು ಕರೆಯುತ್ತಾರೆ ಅವರ ನಾಟಕಗಳಲ್ಲಿನ ಕನ್ನಡಾಂಗ್ಲೋ ಪದಗಳ ಬಳಕೆ ಬಹು ವಿಶಿಷ್ಟವಾದುದು. ತಮ್ಮ ನಾಟಕಗಳ ಮೂಲಕ ಕನ್ನಡಿಗರನ್ನು ನಗಿಸಿ, ನಲಿಸಿ ಕನ್ನಡಿಗರ ಮನದಲ್ಲಿ ಸದಾ ನೆಲೆಸಿರುವವರು ಕೈಲಾಸಂ, ಅದಕ್ಕಾಗಿಯೆ ಹಿರಿಯರಿಂದ 'ಕನ್ನಡಕ್ಕೊಬ್ಬನೇ ಕೈಲಾಸಂ' ಎಂದು ಕರೆಸಿಕೊಂಡರು. ನ್ಯಾಯಾಧೀಶನ ಮಗನಾಗಿ ಭೂಗರ್ಭಶಾಸ್ತ್ರವನ್ನು ಓದಲು ಇಂಗ್ಲೆಂಡಿಗೆ ಓದಲು ಹೋಗಿ ಅಲ್ಲಿನ 20ನೇ ಶತಮಾನದ ಆರಂಭ ಕಾಲದ ನಾಟಕಗಳಿಗೆ ಮೊರೆ ಹೋದರು. ಪೌರಾಣಿಕ, ಚಾರಿತ್ರಿಕ ನಾಟಕಗಳು ಮೆರೆಯುತ್ತಿದ್ದ ಕಾಲದಲ್ಲಿ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಿ ಸಮಾಜದ ವಿಡಂಬನೆಗೆ ಪರಿಭಾಷೆಯನ್ನು ನಾಟಕದ ಮೂಲಕ ನೀಡಿದರು. ಟೊಳ್ಳುಗಟ್ಟಿ ನಾಟಕದ ಮೂಲಕ ಶಿಕ್ಷಣದ ಮಹತ್ವವನ್ನು ನೂರು ವರ್ಷಗಳ ಹಿಂದೆಯೇ ಹೇಳಿದ ಕೈಲಾಸಂ ಅವರನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವ ಅನಿವಾರ್ಯತೆ ಕನ್ನಡ ಜಗತ್ತಿಗೆ ಇದೆ ಎಂದರು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಟಿ.ಎಂ. ಮೈಲಾರಪ್ಪ, ಆಡಳಿತ ಮಂಡಳಿ ಸದಸ್ಯರಾದ ಮಾಲಿನಿ ಪ್ರಹ್ಲಾದ್, ದೆಹಲಿ ಹಿರಿಯ ಮಾಧ್ಯಮಿಕ ಶಾಲೆಯ ಉಪ ಪ್ರಾಂಶುಪಾಲರಾದ ಸೌಮ್ಯ ಎನ್.ಎಂ., ವಿದ್ಯಾರ್ಥಿಗಳು, ಶಿಕ್ಷಕ ವೃಂದ ಹಾಗೂ ಪೋಷಕರು ಉಪಸ್ಥಿತರಿದ್ದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಥಮಿಕ ವಿಭಾಗದ ಸಹ ಶಿಕ್ಷಕಿಯರಾದ ಪೂರ್ಣಿಮ ಎನ್. ಮತ್ತು ಸುನೀತಾ ಎನ್.ಜೆ. ಕೈಲಾಸಂ ಅವರ ನಾನು ಕೋಳಿಕೆ ರಂಗ ಗೀತೆಯನ್ನು ಪ್ರಸ್ತುತಪಡಿಸಿದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕರಾದ ಡಾ. ಎಂ. ಎಸ್. ಶಶಿಕುಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಾಲಾ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಸ್ವಾಗತಿಸಿದರು. ವಿದ್ಯಾರ್ಥಿ ಅಭಿಷೇಕ್ ಉಭಾಳೆ ಅತಿಥಿ ಅವರನ್ನು ಪರಿಚಯಿಸಿದರು. ರಾಜ್ಯಶಾಸ್ತ್ರ ಉಪನ್ಯಾಸಕರಾದ ನಾಗರಾಜ ಎಂ. ವಂದಿಸಿದರು. ಪೂರ್ವ ಪ್ರಾಥಮಿಕ ವಿಭಾಗದ ಸಹ ಶಿಕ್ಷಕಿ ಪ್ರತಿಭಾ ಗೌಡ ಕಾರ್ಯಕ್ರಮ ನಿರೂಪಿಸಿದರು.

*ಅರವಿಂದ ಬಿಜೈ*

## 'ಮಾಸ್ತಿ ಸವಿನೆನಪು'

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ಸಣ್ಣಕಥೆಗಳ ಜನಕ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಜನ್ಮದಿನಾಚರಣೆಯ ಅಂಗವಾಗಿ ಜೂನ್ 6ರಂದು ನಿಸ್ತಂತು ಮಾಧ್ಯಮದ ಮೂಲಕ ಆಯೋಜಿಸಿದ್ದ 'ಮಾಸ್ತಿ ಸವಿನೆನಪು' ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಸಾಹಿತಿ, ವಿಮರ್ಶಕ ಡಾ. ಎಚ್.ಎಸ್. ಸತ್ಯನಾರಾಯಣ ಅವರು ಮಾತನಾಡುತ್ತಾ ವಾರಾನ್ನದ ಮೂಲಕ ವಿದ್ಯಾಭ್ಯಾಸ ಪಡೆದ ಮಾಸ್ತಿ ಅವರಿಗೆ ಬಡತನದ ಅರಿವಿತ್ತು. ಪ್ರತಿ ಪರೀಕ್ಷೆಯಲ್ಲೂ ಪ್ರಥಮ ಸ್ಥಾನ ಮಾಸ್ತಿ ಅವರಿಗೆ ಖಾಯಂ ಆಗಿತ್ತು. ಮುಂದೆ ತನಗೆ ದೊರೆತ ಅಧಿಕಾರವನ್ನು ಬಡಜನರ ಬದುಕಿಗಾಗಿ, ಸಮಾಜಕ್ಕಾಗಿ ಮೀಸಲಿಟ್ಟರು.

'ಶ್ರೀನಿವಾಸ' ಎಂಬ ಕಾವ್ಯನಾಮದಲ್ಲಿ ಬರೆಯುತ್ತಿದ್ದ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು ಕನ್ನಡ ಸಾಹಿತ್ಯ ಲೋಕದಲ್ಲಿ ಮಾಸ್ತಿ ಕನ್ನಡದ ಆಸ್ತಿ ಎಂದೇ ಜನಜನಿತರಾದರು. ನೇರನುಡಿಯ, ಮಾನವೀಯ ತುಡಿತವಿರುವ, ಮಗುವಿನಂಥ ಅಂತಃಕರಣ ತುಂಬಿದ್ದ ಮಾಸ್ತಿ ಅವರು ಸಣ್ಣಕತೆಯನ್ನು ಪ್ರಧಾನ ಸಾಹಿತ್ಯ ಪ್ರಕಾರವನ್ನಾಗಿಸಿ ಕನ್ನಡ ಸಾಹಿತ್ಯ ಲೋಕವನ್ನು ಬೆಳಗಿದವರು. ದ.ರಾ. ಬೇಂದ್ರೆ, ಜಿ.ಪಿ. ರಾಜರತ್ನಂ ಅವರಂತಹ ಕವಿಗಳಿಗೆ ಸಾಹಿತ್ಯ ಪೋಷಕರಾಗಿದ್ದರು. ಮಾಸ್ತಿ ಅವರ ಕತೆ, ನಾಟಕ, ಕಾದಂಬರಿಗಳಲ್ಲಿ ಮಾತ್ರವಲ್ಲ, ಅವರ ಬದುಕಿನಲ್ಲೂ ಕೂಡ ಮಾನವೀಯ ಕಳಕಳಿ ತುಂಬಿಕೊಂಡಿತ್ತು ಎಂದರು.

ವಿದ್ಯಾರ್ಥಿಗಳಾದ ಸುಮಂತ್ ಆಚಾರ್ಯ, ಮಾಸ್ತಿ ಅವರ ಬಾಲ್ಯ ಜೀವನ, ಸನ್ವಿತ್ ಸುವರ್ಣ ಮಾಸ್ತಿ ಅವರ ಕೃತಿಗಳು, ಜೈನಬ್ ಮಾಸ್ತಿ ಅವರ ನುಡಿಮುತ್ತುಗಳು, ಮೊಹಮ್ಮದ್ ಸಾಹಿಲ್ ಮಾಸ್ತಿ ಅವರ ಕವಿತೆ, ನೀಕ್ಷಿತ್ ಕೆ. ಮಾಸ್ತಿ ಅವರ ಚಿಂತನೆಗಳನ್ನು ಪ್ರಸ್ತುಪಡಿಸಿದರು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾದ ಮಾಲಿನಿ ಪ್ರಹ್ಲಾದ್, ದೆಹಲಿ ಹಿರಿಯ ಮಾಧ್ಯಮಿಕ ಶಾಲೆಯ ಉಪ ಪ್ರಾಂಶುಪಾಲರಾದ ಸೌಮ್ಯ ಎನ್. ಎಂ, ನೂರಾರು ವಿದ್ಯಾರ್ಥಿಗಳು, ಶಿಕ್ಷಕ ವೃಂದ, ಪೋಷಕರು ಹಾಗೂ ಕನ್ನಡಿಗರು ಉಪಸ್ಥಿತರಿದ್ದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕರಾದ ಡಾ. ಎಂ.ಎಸ್. ಶಶಿಕುಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಾಲಾ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಅತಿಥಿಗಳನ್ನು ಸ್ವಾಗತಿಸಿದರು. ಪ್ರಾಥಮಿಕ ವಿಭಾಗದ ಸಹಶಿಕ್ಷಕಿಯಾದ ವೀಣಾ ಕೊಠಾರಿ ಅತಿಥಿಯವರನ್ನು ಪರಿಚಯಿಸಿದರು. ಅರವಿಂದ ಬಿಜೈ ಅವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮವನ್ನು ಮಾಸ್ಟರ್ ಭುವನ್ ಸೂರಜ್ ಅವರು ನಿರೂಪಿಸಿದರು.

*ಅರವಿಂದ ಬಿಜೈ*

### 10 ಹಾಗೂ 12ನೇ ತರಗತಿಯ ಸಿಬಿಎಸ್ಇ ಪರೀಕ್ಷಾ ಫಲಿತಾಂಶ-

## ದೆಹಲಿ ಕನ್ನಡ ಶಾಲೆ ವಿದ್ಯಾರ್ಥಿಗಳ ಮೇಲುಗೈ

ಸಿಬಿಎಸ್ಇ 10 ನೇ ಹಾಗೂ 12ನೇ ತರಗತಿಯ 2021-22ನೇ ಶೈಕ್ಷಣಿಕ ಸಾಲಿನ ಪರೀಕ್ಷಾ ಫಲಿತಾಂಶವು ಪ್ರಕಟವಾಗಿದ್ದು, ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯು 12ನೇ ತರಗತಿಯಲ್ಲಿ 97.89% ಹಾಗೂ 10ನೇ ತರಗತಿಯಲ್ಲಿ 92.30% ಫಲಿತಾಂಶವನ್ನು ದಾಖಲಿಸಿದೆ.

10ನೇ ತರಗತಿಯಲ್ಲಿ 88.80% ಅಂಕವನ್ನು ಗಳಿಸಿದ ತುಷಾರ್ ಚಂಡೇಲಿಯ, 12ನೇ ತರಗತಿಯಲ್ಲಿ 95.60% ಅಂಕವನ್ನು ಗಳಿಸಿದ ವಿಜ್ಞಾನ ವಿಭಾಗದ ಮನೀಶ್ ಕುಮಾರ್ ಅವರು ಸಂಸ್ಥೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಯಾಗಿರುತ್ತಾರೆ. ಶಾಲೆಯ ವಿದ್ಯಾರ್ಥಿಗಳು ತೋರಿದ ಬದ್ಧತೆ ಹಾಗೂ ಪೋಷಕರ ಪರಿಶ್ರಮದ ಜೊತೆಗೆ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸಿದಂತಹ ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್, ಶಾಲಾ ಶಿಕ್ಷಕ-ಶಿಕ್ಷಕೇತರ ವೃಂದದವರನ್ನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಅಭಿನಂದಿಸಿದೆ ಎಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕರಾದ ಡಾ. ಎಂ. ಎಸ್. ಶಶಿಕುಮಾರ್ ಅವರು ತಿಳಿಸಿರುತ್ತಾರೆ.

ಈ ಬಾರಿಯ 10ನೇ ಹಾಗು 12ನೇ ತರಗತಿಯ ಸಿಬಿಎಸ್ಇ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

# ವ್ಯಸನ ಮುಕ್ತ ಜೀವನ ಆಗುವುದು ನವನವೀನ-ಡಾ. ರಾಜೇಂದ್ರ ಪಿ. ಜೋಶಿ

## ವಿಶ್ವ ಪರಿಸರ ದಿನ, ವಿಶ್ವ ತಂಬಾಕು ಮುಕ್ತ ದಿನ ಮತ್ತು ರಾಷ್ಟ್ರೀಯ ವೈದ್ಯ ದಿನಾಚರಣೆ :

ವಿಶ್ವ ತಂಬಾಕು ಮುಕ್ತ ದಿನಾಚರಣೆಯನ್ನು ಜಗತ್ತಿನಾದ್ಯಂತ ನಾನಾ ಭಾಗಗಳಲ್ಲಿ ಆಚರಿಸಲಾಗುತ್ತಿದೆ. ತಂಬಾಕು ಸೇವನೆ ವಿರುದ್ಧ ಜಾಗೃತಿ ಮೂಡಿಸುವ ಸಲುವಾಗಿ ಹತ್ತು ಹಲವು ಕಾರ್ಯಕ್ರಮದ ಮೂಲಕ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದೆ. ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮ ಜನರಿಗೆ ಸರಳವಾಗಿ ಹಾಗೂ ಸುಲಭವಾಗಿ ಮನವರಿಕೆಯಾಗುವಂತೆ ಸಾಕ್ಷ್ಯಚಿತ್ರ, ಬೀದಿನಾಟಕ, ಹಾಡು, ನೃತ್ಯದ ಮೂಲಕ ತಿಳಿಯಪಡಿಸಲಾಗುತ್ತಿದೆ. ಜಗತ್ತಿನಲ್ಲಿ ಪ್ರತಿ ವರ್ಷ ತಂಬಾಕಿನಿಂದ 60 ಲಕ್ಷ ಜನರು ಸಾವಿಗೀಡಾಗುತ್ತಿದ್ದಾರೆ ಎಂಬುದು ಒಂದು ಅಂದಾಜು. ಮೃತ್ಯು ಕೂಪಕ್ಕೆ ಆಹ್ವಾನಿಸುವ ತಂಬಾಕು ಅದರ ದುಷ್ಪರಿಣಾಮದ ಕುರಿತ ಎಳೆವಯಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ 'ವಿಶ್ವ ತಂಬಾಕು ರಹಿತ ದಿನ', ವಿಶ್ವ ಪರಿಸರ ದಿನಾಚರಣೆ ಹಾಗೂ ರಾಷ್ಟ್ರೀಯ ವೈದ್ಯರ ದಿನಾಚರಣೆಯನ್ನು ಜುಲೈ 2 ರಂದು ಸಂಸ್ಥೆಯ ಜಿ.ಪಿ. ರಾಜರತ್ನಂ ಸಭಾಂಗಣದಲ್ಲಿ ಆಚರಿಸಲಾಯಿತು.

ಕೇಂದ್ರ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಜನರಲ್ ಡಾ. ರಾಜೇಂದ್ರ ಪಿ. ಜೋಶಿ, ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ತಂಬಾಕು ಸೇವನೆಯಿಂದ ಮುಕ್ತಿ ಹೊಂದಬೇಕಾದರೆ ಸ್ವಯಂ ನಿಯಂತ್ರಣದಿಂದ ಮಾತ್ರ ಸಾಧ್ಯ. ತಂಬಾಕು ಸೇವನೆಯ ಹಾನಿಕಾರಕ ಪರಿಣಾಮಗಳ ಕುರಿತಾಗಿ ಜನ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ತಂಬಾಕು ಸೇವನೆ ತ್ಯಜಿಸುವ ಪೂರಕವಾಗಿ ಹಲವು ರೀತಿಯ ಔಷಧಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಅದರಂತೆ, ವ್ಯಸನ ಮುಕ್ತ ಕೇಂದ್ರಗಳು ಇತ್ತೀಚಿಗೆ ಕಾಣಬಹುದಾಗಿದೆ. ವ್ಯಸನಿಗಳಿಗೆ ಇವು ಬಹು ಉಪಯೋಗಕಾರಿಯಾಗಿವೆ ಎಂದು ತಿಳಿಸಿದರು. ನಮ್ಮೆಲ್ಲರಿಗೂ ಆಹಾರ ನೀಡುವ, ನಮ್ಮ ಜೀವನಕ್ಕೆ ಬೇಕಾದ ಅಗತ್ಯ ಜೀವನಾಂಶಗಳನ್ನು ಪರಿಸರ ಪೂರೈಸುತ್ತದೆ. ತ್ಯಾಜ್ಯ ನಿಯಂತ್ರಿಸುವುದರ ಮೂಲಕ, ಗಾಳಿ ಮತ್ತು ನೀರು ಕಲುಷಿತಗೊಳ್ಳದಂತೆ ಪರಿಸರವನ್ನು ಕಾಪಾಡಬೇಕು ಹಾಗೂ ಅತಿಯಾದ ರಾಸಾಯನಿಕ ಬಳಕೆ ಪರಿಣಾಮ ಪರಿಸರದ ಮೇಲಾಗುತ್ತಿದೆ ಎಂದು ವಿವರಿಸಿದರು. ಪರಿಸರ ಸಂರಕ್ಷಣೆ ಹಾಗೂ ಜಾಗೃತಿ ಕುರಿತು ಮಕ್ಕಳಿಗೆ ತಿಳಿಸಿಕೊಡುವ ನಿಟ್ಟಿನಲ್ಲಿ ವಿಚಾರ ಮಂಡಿಸಿದರು.

ದೆಹಲಿ ವಿಶ್ವವಿದ್ಯಾಲಯದ ಪರಿಸರ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಸ್ವಾತಿ ದಿವಾಕರ್ ಅವರು ಜೀವ ವೈವಿಧ್ಯಗಳ ಸಂರಕ್ಷಣೆ ಕುರಿತಾಗಿ ಮಾತನಾಡುತ್ತಾ, ಅಪರೂಪದ ಜೀವವೈವಿಧ್ಯಗಳು ಅರಣ್ಯ ನಾಶದಿಂದ ಹಾಗೂ ತಮಗೆ ದೊರಕದಿರುವ ಆಹಾರದ ಕೊರತೆಯಾಗಿ ವಾಸ ಬದಲಾವಣೆಯಿಂದ ಜೀವವೈವಿಧ್ಯ ಅಳಿವಿನ ಅಂಚಿನಲ್ಲಿದೆ. ಅಳಿವಿನಲ್ಲಿರುವ ಪ್ರಾಣಿಗಳ ಬಗ್ಗೆ, ಪ್ರಾಣಿ ಸಂಕುಲ, ಸಸ್ಯ ಸಂಕುಲಗಳ ಅವಶ್ಯಕತೆ ಹಾಗೂ ಅವುಗಳ ಅನಿವಾರ್ಯತೆ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಿದರು. ಇದೇ ಸಂದರ್ಭದಲ್ಲಿ ಪ್ರಾಣಿಗಳ, ಕೀಟಗಳ ವಿಭಿನ್ನ ರೀತಿಯ ಧ್ವನಿ ತಿಳಿಸುವ ವಿಶಿಷ್ಟ ಮತ್ತು ವೈಶಿಷ್ಟ್ಯಗಳಿಂದ ಕೂಡಿದ ಚಿತ್ರ ಪ್ರದರ್ಶನ ಮಾಡುವುದರ ಮೂಲಕ ಈ ಕಾರ್ಯಕ್ರಮಕ್ಕನುಗುಣವಾದ ಮಾಹಿತಿ ಆಗರವನ್ನೇ ನೀಡಿದರು. ಅಳಿವಿನಂಚಿನಲ್ಲಿರುವ ಪ್ರಾಣಿಗಳ





ಆಹಾರ ಚಕ್ರ (food chain) ಮಾಹಿತಿ ವಿವರವನ್ನು ಒದಗಿಸಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ. ಎಂ.ಎಸ್ ಶಶಿಕುಮಾರ್ ಅವರು ಉತ್ತರಾಖಂಡ ರಾಜ್ಯದ ಚಮೋಲಿ ಜಿಲ್ಲೆಯಲ್ಲಿಯಲ್ಲಿರುವ 'ವ್ಯಾಲಿ ಆಫ್ ಫ್ಲವರ್ಸ್' ನ್ಯಾಷನಲ್ ಪಾರ್ಕ್ ಹಾಗೂ ಅದರ ವಿವರಗಳುಳ್ಳ ಸಾಕ್ಷ್ಯಚಿತ್ರ ಶಾಲಾ ಮಕ್ಕಳಿಗೆ ಪ್ರದರ್ಶಿಸಿ, ಮಕ್ಕಳು ಸೌಂದರ್ಯೋಪಾಸನೆ ಬೆಳಸಿಕೊಳ್ಳುವ ನಿಟ್ಟಿನಲ್ಲಿ ಅಗತ್ಯ ಮಾಹಿತಿ ನೀಡಿದರು. ಪ್ರಕೃತಿಯ ಸೌಂದರ್ಯವನ್ನು ನೋಡಿ ಸಭಿಕರು, ಮಕ್ಕಳು ಆನಂದಿಸಿ ಮೆಚ್ಚುಗೆ ಸೂಚಿಸಿದರು.

ಮುಖ್ಯ ಅತಿಥಿಗಳಾದ ನೀತಿ ಆಯೋಗದ ವಿಜ್ಞಾನ ಮತ್ತು ತಂತ್ರಜ್ಞಾನ ಉಪಸಲಹೆಗಾರರಾದ ಡಾ. ತ್ಯಾಗರಾಜು ಬಿ.ಎಂ. ಅವರು, ಕಾರ್ಯಕ್ರಮದ ಸಂಕ್ಷಿಪ್ತ ಮಾಹಿತಿಯ ಮೇಲೆ ಪಕ್ಷಿನೋಟ ಬೀರಿದರು ಶಾಲೆಯ ಶಿಸ್ತು, ಕಾರ್ಯಕ್ರಮದ ಅಚ್ಚುಕಟ್ಟುತನವನ್ನು ಶ್ಲಾಘಿಸಿದರು.

ಕಾರ್ಯಕ್ರಮದ ಆರಂಭಕ್ಕೂ ಪೂರ್ವ, ಶಾಲಾ ಆವರಣದಲ್ಲಿ ಸಾಂಕೇತಿಕವಾಗಿ ಗಿಡನೆಟ್ಟು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ನಂತರ ನಡೆದ ಸಂವಾದದಲ್ಲಿ ಶಾಲೆಯ ಹನ್ನೆರಡನೇ ತರಗತಿಯ ಅಭಿಷೇಕ್ ಉಭಾಳೆ ಸೇರಿದಂತೆ ಇನ್ನು ಹಲವಾರು ವಿದ್ಯಾರ್ಥಿಗಳು ಬಹಳ ಸಮಂಜಸವಾದ ಪ್ರಶ್ನೆಗಳನ್ನು ಕೇಳಿ ತಮ್ಮ ಸಂಶಯ ಪರಿಹರಿಸಿಕೊಂಡರು.

6 ರಿಂದ 12ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ 'save green, grow green, stop tobacco before tobacco stop you' ಎಂಬೆರಡು ವಿಷಯಗಳ ಕುರಿತ ಆಯೋಜಿಸಿದ ಚಿತ್ರಕಲಾ ಸ್ಪರ್ಧೆಯಲ್ಲಿ ವಿದ್ಯಾರ್ಥಿ/ ವಿದ್ಯಾರ್ಥಿನಿಯರು ಬಹು ಆಸಕ್ತಿಯಿಂದ ಭಾಗವಹಿಸಿ, ಕಣ್ಣುಕೋರೈಸುವ ಚಿತ್ರ ಬಿಡಿಸಿ, ತಮ್ಮ ಸೃಜನಾತ್ಮಕ ಕಲೆಯ ಅನಾವರಣಗೊಳಿಸಿದರು. ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ, ವಿಜೇತರಾದ ವಿದ್ಯಾರ್ಥಿಗಳಿಗೆ ಅತಿಥಿ ಅಭ್ಯಾಗತರು ಬಹುಮಾನ ವಿತರಿಸಿದರು.

**ಜನಮನ ಸೂರೆಗೊಂಡ ಪರಿಸರ ಗೀತೆ:**

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಶಿಕ್ಷಕ ವೃಂದದವರು, ಎಸ್. ಕುಮಾರ್ ಮತ್ತು ತಂಡದವರು ಹಾಗೂ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯ ಗಿರೀಶ್ ಎಸ್. ಬಳಗ ಪ್ರಸ್ತುಪಡಿಸಿದ ಪರಿಸರ ಗೀತೆಗಳು ಜಾಗೃತಿಯನ್ನೀಯುವುದರ ಜೊತೆಗೆ ಬಹು ಸೊಗಸಾಗಿ ಮೂಡಿಬಂದವು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳನ್ನು ಶಾಲೆಯ ಉಪ ಪ್ರಾಂಶುಪಾಲರಾದ ಎನ್.ಎಂ. ಸೌಮ್ಯ ಹಾಗೂ ಉಪನ್ಯಾಸಕರಾದ ಎನ್. ವಿಜಯ ಕುಮಾರಿ, ಮತ್ತು ವಿಜ್ಞಾನ ಶಿಕ್ಷಕ ಬಲ್ಬೀರ್ ಸಿಂಗ್ ಪರಿಚಯಿಸಿದರು. ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಶಿಕ್ಷಕರಾದ ಪುಷ್ಪಾ ಯಾದವ್ ಕಾರ್ಯಕ್ರಮ ನಿರೂಪಿಸಿದರು. ಸಂಸ್ಥೆಯ ಉಪಾಧ್ಯಕ್ಷರಾದ ಟಿ. ಎಂ. ಮೈಲಾರಪ್ಪ ವಂದಿಸಿದರು.

ಗೌರವ ಖಜಾಂಚಿಗಳಾದ ಟಿ.ಪಿ. ಬೆಳ್ಳಿಯಪ್ಪ, ಆಡಳಿತ ಸಮಿತಿ ಸದಸ್ಯರು ಹಾಗು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ್, ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಎಸ್. ಮೂರ್ತಿ, ನವೀನ ಕುಮಾರ್ ವಿ., ಹರಿಪ್ರಿಯ ಹಾಗೂ ಶಾಲೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

**ಲಾವಣ್ಯ ಎಂ. ಎಸ್.**

# ಸುಗ್ಗಿಯ ಸಂಭ್ರಮ : ಹಂತಿ ಹಾಡು

"ಕರಿ ಎತ್ತು ಕಾಳಿಂಗ

ಬಿಳಿ ಎತ್ತು ಮಾಲಿಂಗಾ...

ಸರಕಾರದೆತ್ತು ಸಾರಂಗೋ"

ಬಾನುಲಿಯ ಮೂಲಕ ಪ್ರಸಾರವಾಗುತ್ತಿದ್ದ ಕೃಷಿರಂಗ ಕಾರ್ಯಕ್ರಮದ ಮುಂಚೆ ಈ ಗೀತೆ ಕೇಳಿ ಬಂದು, ಕೊನೆ ಕೊನೆಗೆ ನಿಧಾನವಾಗಿ ತೆರೆಗೆ ಸರಿಯುತ್ತಿದ್ದ ಈ ಹಾಡಿನ ನೀನಾದಕ್ಕೆ ಒಳಗಾಗದೇ ಇರುವವರು ವಿರಳ. ಈ ಹಾಡು ಆ ದಿನಗಳನ್ನು ಮತ್ತೆ ಮತ್ತೆ ಕೃಷಿಯ ಖುಷಿಯೊಂದಿಗೆ ಮನಸ್ಸಿಗೆ ಮುದ ನೀಡುತ್ತದೆ....

ಕೃಷಿಕರು ಭೂಮಿ ತಾಯಿಯ ಒಡಲಿಗೆ ಬೀಜ ಬಿತ್ತುವುದರಿಂದ ಹಿಡಿದು ಬೆಳೆಯ ಕೊಯ್ಲಿನವರೆಗೂ ಹಗಲಿರುಳೆನ್ನದೇ ತಮ್ಮ ದೈಹಿಕ ಶ್ರಮ ಭೂತಾಯಿಗೆ ಮುಡಿಪಾಗಿಡುತ್ತಾರೆ. ಸುಗ್ಗಿ ಬಂತೆಂದರೆ ಬಿಡುವಿಲ್ಲದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ.

ಹೊಲ-ಗದ್ದೆಗಳಲ್ಲಿ ಉತ್ತು-ಬಿತ್ತುವಾಗ, ವಿಶೇಷವಾಗಿ ಸುಗ್ಗಿಯ ಸಮಯದಲ್ಲಿ ಹಂತಿ ಕಟ್ಟಿದಾಗ ರೈತರು ಹಾಡುವ ಹಂತಿ ಪದಗಳು ಒಂದು ಸಂಭ್ರಮ ಸಡಗರದಿಂದ ಕೂಡಿರುತ್ತಿತ್ತು.

ಸ್ವಚ್ಛ ಮಾಡಿ ಸಾರಿಸಿದ ಕಣದಲ್ಲಿ ಜೋಳದ ರಾಶಿಯ ಸಡಗರ ಬಹು ಜೋರಾಗಿರುತ್ತಿತ್ತು. ಅದು ಬಲು ಸುಂದರ, ಓಡಾಟ, ಗಡಿಬಿಡಿ ಸಂಭ್ರಮವಿರುತ್ತಿತ್ತು.

ಜೋಳದ ಹಾಲು ತುಂಬಿ, ಕಾಳು ಬಲಿತು, ಗಟ್ಟಿಕಾಳಾಗಿ ಒಣಗಿದ ನಂತರ ಜೋಳ ಕಟಾವು ಮಾಡಿ ಸೂಡುಗಳಂತೆ ಕಟ್ಟಿ ಒಂದೆರಡು ದಿನಗಳ ನಂತರ ಗೂಡು ಕಟ್ಟುತ್ತಿದ್ದರು. ಸಿದ್ಧಪಡಿಸಿಕೊಂಡಿದ್ದ ಕಣದಲ್ಲಿ ಗೂಡು ಕಟ್ಟಿದ ತೆನೆ ಮುರಿದು ಒಂದೆಡೆ ಹಾಕಿದ ನಂತರ ಹಂತಿ ಕಟ್ಟುವ ಕೆಲಸ. ಸಿಂಗರಿಸಿದ ಎತ್ತುಗಳಿಂದ ಜೋಳದ ತೆನೆ ತುಳಿಸುವ ವಿಧಾನ ಅದು. ಬೆಳಗಿನವರೆಗೂ ಹಂತಿ ನಡಿಯುತ್ತಿತ್ತು. ರೈತರಿಗೆ ಆಪ್ತ ಸಂಗಾತಿಗಳೆಂದರೆ ಉಳುಮೆ ಮಾಡುವ ಎತ್ತುಗಳು. ಅವು ಅವರಿಗೆ ದೈವ ಸ್ವರೂಪಿ. ಇಂಥ ಜೀವದ ಸಂಗಾತಿಗಳನ್ನು ಕುರಿತ ಮುದ್ದು ಬಸವಣ್ಣ, ಸರದಾರನನ್ನೆತ್ತೆ, ಬಂಟ ಬಸವಣ್ಣ ಎಂದು ಎತ್ತುಗಳನ್ನು ಅವರು ಹಾಡಿ ಹೊಗಳುತ್ತಿದ್ದರು. ಹಂತಿಯಲ್ಲಿ ಉಪಯೋಗಿಸುವ ಸಾಧನಗಳಾದ ಕಡೆಗೋಲು, ಕುಡುಗೋಲು, ಮಂಡೆಯಗೋಲು, ಬ್ಯಾಕೋಲು, ಬಾರ್ಕೋಲು, ವರ್ಗೋಲು.. ಹಂತಿ ಹಾಡಿನಲ್ಲಿ ಯಥೇಚ್ಛವಾಗಿ ಬರುತ್ತವೆ. ಬೆಳಗಾಗುವವರೆಗೂ ಹಂತಿ ಹಾಡುಗಳನ್ನು ಹಾಡುತ್ತಾ, ರೈತ ತನ್ನ ದಣಿವಾರಿಸಿಕೊಳ್ಳುತ್ತಾನೆ. ರೈತ ಕೃಷಿ ಬದುಕನ್ನು ತನ್ನ ಜೋಡಿಯಾಗಿ ದುಡಿಯುವ ಎತ್ತುಗಳ ವರ್ಣನೆಯನ್ನು ತನ್ನ ಹಾಡಾಗಿ ಬಳಸಿಕೊಂಡಿದ್ದಾನೆ. ಹಂತಿ ಆರಂಭಕ್ಕೂ ಮುಂಚೆ ಹಾಡುತ್ತಿದ್ದ....

ದುಂಡ ಭೂಮಿಯ ಮ್ಯಾಲ ಗುಂಡಕ ಖಣ ಮಾಡಿ / ಮೇಟಿ ಏಸ್ ಮೂಲಿ ಹೊಡಿಬೇಕೋ / ಬಿಂಡಿ ಬಿಗಿಬೇಕೊ / ಅಯ್ನರ್ ಕರಸ್ಯಾರ ಪಂಚಾಂಗ ತಗಸ್ಯಾರ / ಪಂಚ ಮುತ್ತೈದೇರಿಗೆ ಕರಸ್ಯಾರೋ / ಗೂಡ ಮುರಿಸ್ಯಾರೋ/ ಖಳದ ಪಾಳದ ಪೂಜಿ ರಾಗೋಲ ದಂಡಿಗಿ ಪೂಜಿ / ಮೇಟಿಯ ಪೂಜಿ ತೆನಿಪೂಜಿ / ಬಸವನ ಪಾದದ ಪೂಜಿ, ಹಣಿ ಪೂಜಿ...

ಇನ್ನು ಹಂತಿ ಮುಕ್ತಾಯಕ್ಕೆ ...


ಹಂತಿ ಹತ್ತಿಗಿ ಬಂತು / ಕಂಕಿ ಕಡಿಯಾಕ ಬಂತು/

ಕಂಚಿನಾರೂತಿ ಬೆಳಗ್ಯಾರ / ಬಸವಣ್ಣ / ಹಂತಿಯ ಕೊಳ್ಳ ಹರದಾರೋ...

ಅಂದು ಜನಪದರಲ್ಲಿ ಜಾನಪದ ಲೋಕವೇ ಮೈದಾಳಿತ್ತು. ಸಮೂಹ ಸಂಪರ್ಕ ಮಾಧ್ಯಮಗಳು ಇಲ್ಲದಿದ್ದ ಅಂದು, ಜನಪದ ಕಲೆಗಳು, ಹಾಡು ಕುಣಿತ. ಎಲ್ಲೆಲ್ಲೂ ಅಂದ ಚೆಂದವೇ. ಸಡಗರ ಸಂಭ್ರಮವೇ ಇತ್ತು. ಜನಪದರು ಸಾಂಸ್ಕೃತಿಕ ಪ್ರತೀಕರಾಗಿದ್ದರು. ಜಾನಪದ ಕಲಾ ಪ್ರಕಾರಗಳನ್ನು ಈಗ ನಡೆಯುವ ಉತ್ಸವ, ಜಾತ್ರೆ, ಸಂತೆಯಂತಹ ಕಾರ್ಯಕ್ರಮಗಳಲ್ಲಿ ಅನಾವರಣವಾಗುತ್ತಿರುವುದನ್ನು ಕಾಣಬಹುದಾಗಿದೆ. ಇಂತಹ ಕಲೆಗಳ ಜೀವಾಳವೇ ಅವುಗಳೊಂದಿಗೆ ತಮ್ಮ ಜೀವ-ಜೀವನವನ್ನು ರೈತರು ಕಟ್ಟಿಕೊಂಡಿದ್ದರು.

***ಅಮರೇಶ***

## ಶ್ರದ್ಧಾಂಜಲಿ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಸಿದ್ದಪ್ಪ ಅವರು ದಿನಾಂಕ 05.07.2022 ರಂದು ನಿಧನರಾಗಿದ್ದಾರೆ.



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ, ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಅರುಣ್ ಕುಮಾರ್ ಅವರು ಬೆಂಗಳೂರಿನ ಸ್ವಗೃಹದಲ್ಲಿ ದಿನಾಂಕ 27.07.2022 ರಂದು ನಿಧನರಾಗಿದ್ದಾರೆ.

ಅಗಲಿದ ಇಬ್ಬರೂ ಶ್ರೀಯುತರುಗಳ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಅವರ ಕುಟುಂಬಗಳಿಗೆ ಅವರ ಅಗಲಿಕೆಯ ದು:ಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ.

**ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ.**

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING
Office :
B-303, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Aug-2022, Vol. No.32, Issue No. 11, Price Rs.1/-
RNI Regn. No. 53405/91, DL-SW-01/4016/22-24
Date of Publication : Aug 8th / 9th, Posting Date : 10th / 11th, Total Pages-20, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P

# ಕಲ್ಯಾಣ ಕರ್ನಾಟಕ ಜಿಲ್ಲಾ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮದ ಆಯ್ದ ಛಾಯಾಚಿತ್ರಗಳು





